# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಏಪ್ರಿಲ್ 27, 2023

ಸಂಪುಟ : 49 ಸಂಚಿಕೆ : 345 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




**ಶಿಖರಕ್ಕೆ ತೈಲಾಭಿಷೇಕ ...** ಕೊಟ್ಟೂರು ತಾಲ್ಲೂಕು ಉಜ್ಜಿನಿ ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ರಥೋತ್ಸವದ ಅಂಗವಾಗಿ ದೇವಾಲಯದ ಗೋಪುರದ ಶಿಖರಕ್ಕೆ ಬುಧವಾರ ಸಂಜೆ ತೈಲಾಭಿಷೇಕ ನೆರವೇರಿತು.

# 5.30 ಕೋಟಿ ಮತದಾರರು

## ಕಳೆದ ಬಾರಿಗಿಂತ ಈ ಬಾರಿ ರಾಜ್ಯದಲ್ಲಿ 16,04,285 ಮತದಾರರ ಸೇರ್ಪಡೆ

ಬೆಂಗಳೂರು, ಏ. 26 - ರಾಜ್ಯ ವಿಧಾನಸಭೆಗೆ ಮೇ 10 ರಂದು ನಡೆಯುತ್ತಿರುವ ಚುನಾವಣೆಯಲ್ಲಿ 5.30 ಕೋಟಿ ಮಂದಿ ಮತ ಚಲಾಯಿಸುವ ಹಕ್ಕು ಪಡೆದಿದ್ದಾರೆ.

ಕಳೆದ ಬಾರಿಗಿಂತ ಈ ಬಾರಿ ರಾಜ್ಯದಲ್ಲಿ 16,04,285 ಹೆಚ್ಚು ಮಂದಿ ಮತದಾರರ ಪಟ್ಟಿಗೆ ಸೇರ್ಪಡೆಗೊಂಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ, ಮಹಿಳೆಯರಿಗಿಂತ ಪುರುಷರೇ ಹೆಚ್ಚು ಮತದಾನದ ಹಕ್ಕು ಪಡೆದಿದ್ದಾರೆ ಎಂದರು.

ಚುನಾವಣೆಯಲ್ಲಿ 2,66,82,156 ಪುರುಷರು, 2,63,98,483 ಮಹಿಳೆಯರು ಹಾಗೂ 4,927 ಇತರರು ಮತದಾನ ಮಾಡುವ ಹಕ್ಕು ಪಡೆದುಕೊಂಡಿದ್ದಾರೆ. ಒಟ್ಟು ಮತದಾರರು ಸಂಖ್ಯೆ 5,30,85, 566 ಆಗಿದೆ.

ಕೇಂದ್ರ ಚುನಾವಣಾ ಆಯೋಗ ಮಾರ್ಚ್ 29 ರಂದು ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆ ಮಾಡಿದ ನಂತರ ಏಪ್ರಿಲ್ 20 ರವರೆಗೆ ಮತದಾರರ ನೋಂದಣಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿತ್ತು. ಈ ಅವಧಿಯಲ್ಲಿ ಅರ್ಹತೆ ಪಡೆದ ಎಲ್ಲಾ ಅರ್ಜಿಗಳನ್ನು ಮತದಾರರ ಪಟ್ಟಿಯನ್ನು ನವೀಕರಿಸಿದ ನಂತರ ಇಷ್ಟು ಮಂದಿ ಮತದಾನದ ಹಕ್ಕು ಪಡೆದಿದ್ದಾರೆ.

ಈ ಬಾರಿ ಒಟ್ಟು 11,71,558 ಯುವ ಮತದಾರರು ಪ್ರಥಮ ಬಾರಿಗೆ ತಮ್ಮ ಹಕ್ಕು ಚಲಾಯಿಸಲು ಅವಕಾಶ ಪಡೆದುಕೊಂಡಿದ್ದಾರೆ ಎಂದು ಮುಖ್ಯಚುನಾವಣಾಧಿಕಾರಿ ತಿಳಿಸಿದರು.

ಪ್ರಸಕ್ತ ಚುನಾವಣೆಯಲ್ಲಿ 5,71,281 ವಿಶೇಷ ಚೇತನ ಮತದಾರರು ಮತ ಚಲಾವಣೆಗೆ ಅವಕಾಶ ಪಡೆದುಕೊಂಡಿದ್ದಾರೆ. 80 ವರ್ಷಕ್ಕಿಂತ ಮೇಲ್ಪಟ್ಟ 1,21,592 ಹಿರಿಯ ಮತದಾರರು ಮತದಾನದ ಹಕ್ಕು ಪಡೆದಿದ್ದಾರೆ.

ಪ್ರಸ್ತುತ ಸಾರ್ವತ್ರಿಕ ಚುನಾವಣೆಗೆ ಮತದಾರರ ಭಾವಚಿತ್ರ ಪಟ್ಟಿಯನ್ನು ಬಳಸಲಾಗುವುದು ಮತ್ತು ಆ ಪಟ್ಟಿಯ ಕಾರ್ಯವು ಶೇ. 100 ರಷ್ಟು ಪೂರ್ಣಗೊಂಡಿದೆ ಎಂದರು. ಮತಗಟ್ಟೆಯಲ್ಲಿ ಮತದಾನದ (4ನೇ ಪುಟಕ್ಕೆ)

### ದಾವಣಗೆರೆ ಜಿಲ್ಲೆಯಲ್ಲಿ 7.21 ಲಕ್ಷ ಮತದಾರರು

**ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಈ ಬಾರಿ 14.42 ಲಕ್ಷ ಮತದಾರರು ತಮ್ಮ ಹಕ್ಕು ಚಲಾಯಿಸುವ ಅಧಿಕಾರ ಪಡೆದುಕೊಂಡಿದ್ದಾರೆ. ಜಿಲ್ಲೆಯಲ್ಲಿ 7,21,964 ಪುರುಷ, 7,20,004, ಇತರೆ 118 ಹಾಗೂ 467 ಸೇವಾ ಮತದಾರರಿದ್ದಾರೆ.**



## ನಕ್ಸಲ್ ದಾಳಿಯಲ್ಲಿ 10 ಪೊಲೀಸ್ ಸಿಬ್ಬಂದಿಗಳ ಸಾವು

ದಂತೇವಾಡ, ಏ. 26- ಛತ್ತೀಸ್‌ಘಡದ ದಂತೇವಾಡ ಜಿಲ್ಲೆಯಲ್ಲಿ ನಕ್ಸಲರು ನಡೆಸಿದ ಸ್ಫೋಟದಲ್ಲಿ ಹತ್ತು ಪೊಲೀಸ್ ಸಿಬ್ಬಂದಿ ಹಾಗೂ ವಾಹನ ಚಾಲಕರೊಬ್ಬರು ಸಾವನ್ನಪ್ಪಿದ್ದಾರೆ.

ಅರಣ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ದಾಳಿ ನಡೆಸಲಾಗಿದೆ. ಪೊಲೀಸ್ ಸಿಬ್ಬಂದಿ ಇದ್ದ ಮಿನಿ ಸರಕು ವಾಹನವನ್ನು ನಕ್ಸಲರು ಸ್ಫೋಟಿಸಿದ್ದಾರೆ. ನಕ್ಸಲ್ ವಿರೋಧಿ ಕಾರ್ಯಾಚರಣೆ ಪೂರೈಸಿದ ನಂತರ ಮರಳುವಾಗ ಈ ದಾಳಿ ನಡೆದಿದೆ. ಘಟನೆಯ ನಂತರ ಸ್ಥಳಕ್ಕೆ ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ರವಾನಿಸಲಾಗಿದ್ದು, ಕಾರ್ಯಾಚರಣೆ ಆರಂಭಿಸಲಾಗಿದೆ.

# ಜಿಲ್ಲೆಯಲ್ಲಿ ಬಿಜೆಪಿ ಪರ ಕಿಚ್ಚ ಸುದೀಪ್ ರೋಡ್ ಶೋ

ದಾವಣಗೆರೆ, ಏ. 26- ಜಿಲ್ಲೆಯ ಜಗಳೂರು, ಮಾಯಕೊಂಡ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ರೋಡ್ ಶೋ ನಡೆಸಿದ ಚಿತ್ರ ನಟ ಸುದೀಪ್ ಸಂಜೆ ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಲೋಕಿಕೆರೆ ನಾಗರಾಜ್ ಪರವೂ ಮತ ಯಾಚಿಸಿದರು.

ಮಧ್ಯಾಹ್ನ 4 ಗಂಟೆ ವೇಳೆಗೆ ನಗರದ ನಿಟ್ಟುವಳ್ಳಿಯ ದುರ್ಗಾಂಬಿಕಾ ದೇವಸ್ಥಾನದಿಂದ ಸುದೀಪ್ ರೋಡ್ ಶೋ ಆರಂಭವಾಗಿ ಎಚ್‌ಕೆಆರ್ ಸರ್ಕಲ್‌ನಲ್ಲಿ ಅಂತ್ಯಗೊಂಡಿತು.

ಜೆಸಿಬಿ ಮೂಲಕ ಬೃಹತ್ ಕನಕಾಂಬರ ಹಾರಹಾಕುವ ಮೂಲಕ ಸುದೀಪ್ ಅವರನ್ನು ಸ್ವಾಗತಿಸಲಾಯಿತು. ಸುದೀಪ್ ನೋಡಲು ಅಭಿಮಾನಿಗಳು ಮುಗಿ ಬಿದ್ದರು. ಮನೆಯ ತಾರಸಿ, ರಸ್ತೆಯಲ್ಲಿದ್ದ ವಾಹನಗಳನ್ನು ಏರಿ ಕಿಚ್ಚನಿಗೆ ಕೈ ಬೀಸಿದರು. ಮೊಬೈಲ್‌ನಲ್ಲಿ ಫೋಟೋ, ವಿಡಿಯೋ ತೆಗೆದುಕೊಂಡು ಸಂಭ್ರಮಿಸಿದರು. ಕಿಚ್ಚ ಸುದೀಪ್‌ಗೆ ಜೈ, ಬಿಜೆಪಿಗೆ ಜೈ, ಭಾರತ್ ಮಾತಾಕಿ ಜೈ ಎಂದು ಘೋಷಣೆ ಕೂಗಿದರು. ಇದಕ್ಕೂ ಮುನ್ನ ಸುದೀಪ್ ಆಗಮಿಸುತ್ತಿದ್ದಂತೆ ಅಭಿಮಾನಿಗಳು ಕಾರಿನತ್ತ ಓಡಿ ಬಂದು ಮುತ್ತಿಗೆ ಹಾಕಿ ಫೋಟೋ ತೆಗೆಸಿಕೊಳ್ಳಲು ಮುಗಿ ಬಿದ್ದರು.



ರೋಡ್ ಶೋ ವೇಳೆ ಮಾತನಾಡಿದ ಸುದೀಪ್, ಲೋಕಿಕೆರೆ ನಾಗರಾಜ್ ಅವರ ಪರ ಪ್ರಚಾರ ಮಾಡಲು ಬಂದಿದ್ದೇನೆ. ಚಿತ್ರರಂಗವೇ ಆಗಲೀ, ರಾಜಕೀಯವೇ ಆಗಲೀ ಜನ ಬದಲಾವಣೆ ಬಯಸುತ್ತಾರೆ. ದಾವಣಗೆರೆ ಜನವೂ ಬದಲಾವಣೆ ಬಯಸಿದ್ದಾರೆ ಎಂದರು.

ಲೋಕಿಕೆರೆ ನಾಗರಾಜ್ ಅವರು ಗೆಲ್ಲುತ್ತಾರೆ. ಆ ಬಳಿಕ ಇವರ ಜೊತೆಯಲ್ಲೇ ಬರುತ್ತೇನೆ. ದಾವಣಗೆರೆ ಬೆಣ್ಣೆ ದೋಸೆಗೆ ಫೇಮಸ್ ಅಲ್ವಾ, ನನಗೂ ಬೆಣ್ಣೆ ದೋಸೆ ಕೊಡಿಸ್ತೀರಾ ಅಲ್ವಾ? ಎಂದು ಪ್ರಶ್ನಿಸಿದರು. ವೀರ ಮದಕರಿ ಚಿತ್ರದ ಡೈಲಾಗ್ ಹೇಳಿ ರಂಜಿಸಿದರು.

ನಿಮ್ಮೆಲ್ಲರ ಪ್ರೀತಿಗೆ ಸ್ವಾಗತ, ನಾನು ಬಂದರೆ ಇಲ್ಲಿ ಪೊಲೀಸರಿಗೂ ಕಷ್ಟ. ನನಗೆ ಸಿದ್ದೇಶಣ್ಣ (ಜಿ.ಎಂ.ಸಿದ್ದೇಶ್ವರ) ತುಂಬಾ ಪರಿಚಯ ಅವರ ಮೇಲೆ ಅಭಿಮಾನವಿದೆ ಎಂದರು.

ಅಭ್ಯರ್ಥಿ ಲೋಕಿಕೆರೆ ನಾಗರಾಜು, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ವೀರೇಶ್ ಹನಗವಾಡಿ, ಕಾರ್ಯದರ್ಶಿ ಬಿ.ಎಸ್.ಜಗದೀಶ್, ಪಾಲಿಕೆ ಸದಸ್ಯ ವೀರೇಶ್ ಪೈಲ್ವಾನ್, ಎಸ್.ಟಿ. ವೀರೇಶ್, ಮುಖಂಡರಾದ ಜಿ.ಎಸ್. ಅನಿತ್‌ಕುಮಾರ್, ಲಕ್ಷ್ಮಣ ಇನ್ನಿತರರು ಹಾಜರಿದ್ದರು.

## ಆಯುರ್ವೇದ ವೈದ್ಯರಿಗೆ ಸಮ ವೇತನ ನೀಡಲಾಗದು

ನವದೆಹಲಿ, ಏ. 26 – ಆಯುರ್ವೇದ ಪದ್ಧತಿಯ ವೈದ್ಯರು ಅಲೋಪತಿ ವೈದ್ಯರಿಗೆ ಸಮನಾದ ವೇತನ ಪಡೆಯಲಾಗದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಸಮಾನ ವೇತನ ನೀಡುವಂತೆ ಗುಜರಾತ್ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಅಲೋಪತಿ ವೈದ್ಯರು ತುರ್ತು ಚಿಕಿತ್ಸೆ ಹಾಗೂ ಸಂಕೀರ್ಣವಾದ ಶಸ್ತ್ರಚಿಕಿತ್ಸೆ ಮಾಡಬಲ್ಲರು. ಮರಣೋತ್ತರ ಶವ ಪರೀಕ್ಷೆ ಸಹ ಅಲೋಪತಿ ವೈದ್ಯರೇ ಮಾಡುತ್ತಾರೆ ಎಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಹೇಳಲಾಗಿದೆ.

ಆಯುರ್ವೇದ ಪದ್ಧತಿಯ ಪ್ರಾಮುಖ್ಯತೆಯನ್ನು (2ನೇ ಪುಟಕ್ಕೆ)

## ಡಿಎಪಿ ದ್ರವ ಗೊಬ್ಬರಕ್ಕೆ ಚಾಲನೆ

ನವದೆಹಲಿ, ಏ. 26 – ಇಫ್ಕೋ ಕಂಪನಿಯ ನ್ಯಾನೋ ದ್ರವ ಡಿ.ಎ.ಪಿ. ರಸಗೊಬ್ಬರಕ್ಕೆ ಕೇಂದ್ರ ಸಹಕಾರ ಸಚಿವ ಅಮಿತ್ ಷಾ ಚಾಲನೆ ನೀಡಿದ್ದಾರೆ. 500 ಎಂ.ಎಲ್. ಗೊಬ್ಬರಕ್ಕೆ 600 ರೂ. ಬೆಲೆ ನಿಗದಿ ಪಡಿಸಲಾಗಿದೆ.

ಒಂದು ಬಾಟಲಿ ನ್ಯಾನೋ ಡಿಎಪಿ ಗೊಬ್ಬರವು 50 ಕೆ.ಜಿ. ಸಾಂಪ್ರದಾಯಿಕ ಡಿ.ಎ.ಪಿ.ಗೆ ಸಮನಾಗಿದೆ. ಅದರ ಬೆಲೆ ಪ್ರಸಕ್ತ 1,350 ರೂ. ಆಗಿದೆ.

2021ರಲ್ಲಿ ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ಸ್ ಕೋ ಆಪರೇಟಿವ್ (ಇಫ್ಕೋ) ಸಂಸ್ಥೆಯು ವಿಶ್ವದಲ್ಲೇ ಮೊದಲ ಬಾರಿಗೆ ನ್ಯಾನೋ ಯುರಿಯಾ ಗೊಬ್ಬರ ಉತ್ಪಾದಿಸಿತ್ತು.

## ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಅರುಣ್‌ಕುಮಾರ್



ದಾವಣಗೆರೆ, ಏ.26- ದಾವಣಗೆರೆ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಹಿರಿಯ ನ್ಯಾಯವಾದಿ ಎಲ್.ಹೆಚ್. ಅರುಣ್ ಕುಮಾರ್ ಅತ್ಯಧಿಕ 62 ಮತಗಳ ಅಂತರದಿಂದ ಜಯಶೀಲರಾಗಿದ್ದಾರೆ.

ಎಲ್.ಹೆಚ್. ಅರುಣ್ ಕುಮಾರ್ 319 ಮತಗಳನ್ನು ಗಳಿಸಿದರೆ, ಅವರ ಪ್ರತಿಸ್ಪರ್ಧಿ ಪಂಚಪ್ಪ ಯಲ್ಲಪ್ಪ ಹಾದಿಮನಿ 257 ಮತಗಳನ್ನು ಪಡೆದಿದ್ದಾರೆ. ಅವರೊಂದಿಗೆ ಕಣದಲ್ಲಿದ್ದ ಮಲ್ಲಿಕಾರ್ಜುನಪ್ಪ ಗುಮ್ಮನೂರು 168 ಮತ್ತು ಗೋಪಾಲ್ 93 ಮತಗಳನ್ನು ಪಡೆದಿದ್ದಾರೆ. 9 ಮತಗಳು ತಿರಸ್ಕೃತಗೊಂಡಿವೆ.

ಕಾರ್ಯದರ್ಶಿಯಾಗಿ ಎಸ್. ಬಸವರಾಜ್ ಅವರು 10 ಮತಗಳ ಅಂತರಲ್ಲಿ ಚುನಾಯಿತರಾಗಿದ್ದಾರೆ. ಬಸವರಾಜ್ 298 ಮತಗಳನ್ನು ಗಳಿಸಿದರೆ, ಅವರ ಪ್ರತಿಸ್ಪರ್ಧೆ ಎಸ್. ಮಂಜು 288 ಮತಗಳನ್ನು ಪಡೆದಿದ್ದಾರೆ. ಮತ್ತೋರ್ವ ಆಕಾಂಕ್ಷಿ ಪಿ.ಲಕ್ಕಪ್ಪ 246 ಮತಗಳನ್ನು ಪಡೆದಿದ್ದಾರೆ. 10 ಮತಗಳು ತಿರಸ್ಕೃತಗೊಂಡಿವೆ.

ಉಪಾಧ್ಯಕ್ಷರಾಗಿ ಜಿ.ಕೆ. ಬಸವರಾಜ್ (2ನೇ ಪುಟಕ್ಕೆ)

# ಜಗಳೂರು ಮಾರಿಕಾಂಬೆಗೆ ಮೀಸಲು



ಜಗಳೂರು, ಏ.26- ಪಟ್ಟಣದ ಮಾರಿಕಾಂಬ ದೇವಿ ಜಾತ್ರಾ ಮಹೋತ್ಸವ 5 ವರ್ಷಗಳ ನಂತರ ಏಪ್ರಿಲ್ 25 ರಿಂದ ಏಪ್ರಿಲ್ 28 ರವರೆಗೆ ಆರಂಭವಾಗಿದೆ. ಪಟ್ಟಣದ ಮನೆ ಮನೆಗಳಲ್ಲಿ ಸಂಭ್ರಮ ಮನೆ ಮಾಡಿದೆ. ವಿದ್ಯುತ್ ದೀಪಗಳಿಂದ ನಗರ ಅಲಂಕಾರಗೊಂಡಿದೆ.

ಏಪ್ರಿಲ್ 25 ರಂದು ಗಂಗಾಪೂಜೆ ದೇವಿ ಉತ್ಸವ ಮೂರ್ತಿ ಮೆರವಣಿಗೆ ವಾದ್ಯ ವೃಂದಗಳೊಂದಿಗೆ ಬೊಂಬೆ ಕುಣಿತಕ್ಕೆ ಹೆಜ್ಜೆ ಹಾಕುತ್ತಾ, ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದೇವಸ್ಥಾನ ತಲುಪಿತು.ಬುಧವಾರ ಸಹಸ್ರಾರು ಭಕ್ತ ಸಮೂಹದಿಂದ ಮೀಸಲು ಅರ್ಪಣೆ ಮಾಡಿ ಸರದಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆದರು.

ವಿಶೇಷ ಪೂಜೆ ಸಲ್ಲಿಕೆ, ಹರಕೆ ತೀರಿಸುವಿಕೆ, ವಿವಿಧ ಧಾರ್ಮಿಕ ಕೈಂಕರ್ಯಗಳು ಜರುಗಿದವು. ಏಪ್ರಿಲ್ 28 ರ ಶುಕ್ರವಾರ ಸಂಜೆ ವೈಭವದಿಂದ ರಥೋತ್ಸವ ನಡೆಯಲಿದೆ. ಇಂದು ಮತ್ತು ನಾಳೆ ಬೆಳಿಗ್ಗೆ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ.

## ದೇಶೀಯ ವೈದ್ಯಕೀಯ ಉಪಕರಣಗಳ ನೀತಿಗೆ ಅಸ್ತು

ನವದೆಹಲಿ, ಏ. 26 – ದೇಶೀಯವಾಗಿ ವೈದ್ಯಕೀಯ ಉಪಕರಣಗಳ ಉತ್ಪಾದನೆಗೆ ಉತ್ತೇಜನ ನೀಡುವ ನೂತನ ನೀತಿಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ರಾಷ್ಟ್ರೀಯ ವೈದ್ಯಕೀಯ ಉಪಕರಣಗಳ ನೀತಿಯ ಮೂಲಕ ಮುಂದಿನ ಐದು ವರ್ಷಗಳಲ್ಲಿ ಈ ವಲಯದಲ್ಲಿ 50 ಶತಕೋಟಿ ಡಾಲರ್ ಉತ್ಪಾದನೆ ಕಾಣುವ ಗುರಿ ಹೊಂದಲಾಗಿದೆ. ಪ್ರಸಕ್ತ ಈ ವಲಯದಲ್ಲಿ 11 ಶತಕೋಟಿ ಡಾಲರ್ ಮೌಲ್ಯದ ಸರಕುಗಳು ಉತ್ಪಾದನೆಯಾಗುತ್ತಿವೆ. ಈ ಬಗ್ಗೆ ಮಾಹಿತಿ (2ನೇ ಪುಟಕ್ಕೆ)

## 157 ನರ್ಸಿಂಗ್ ಕಾಲೇಜುಗಳ ಸ್ಥಾಪನೆಗೆ ಕೇಂದ್ರದ ಒಪ್ಪಿಗೆ

ನವದೆಹಲಿ, ಏ. 26 – ಈಗಿರುವ ವೈದ್ಯಕೀಯ ಕಾಲೇಜುಗಳ ಆವರಣದಲ್ಲೇ 157 ನರ್ಸಿಂಗ್ ಕಾಲೇಜುಗಳನ್ನು ಸ್ಥಾಪಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಈ ವಿಷಯ ತಿಳಿಸಿರುವ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, ಗುಣಮಟ್ಟದ ಹಾಗೂ (2ನೇ ಪುಟಕ್ಕೆ)

## ರಕ್ಷಣಾ ವೆಚ್ಚದಲ್ಲಿ ಭಾರತಕ್ಕೆ 4ನೇ ಸ್ಥಾನ

ನವದೆಹಲಿ, ಏ. 26 - ರಕ್ಷಣಾ ವಲಯದ ವೆಚ್ಚದ ವಿಷಯದಲ್ಲಿ ಭಾರತ 2022ರಲ್ಲಿ ವಿಶ್ವದಲ್ಲೇ ನಾಲ್ಕನೇ ಸ್ಥಾನದಲ್ಲಿದೆ ಎಂದು ಸ್ವೀಡನ್‌ನ ಚಿಂತನಾ ಸಂಸ್ಥೆಯಾದ ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರೀಸರ್ಚ್ (2ನೇ ಪುಟಕ್ಕೆ)


GURUDATT ACADEMY
Gateway to NEET & IIT
Classroom coaching for
8th, 9th, 10th std ( CBSE )
1st PUC & 2nd PUC ( NEET / JEE )
Supplementary batches.
Rangamahal, PJ Extension, Davangere.
Call: 9739865711


# ಮತದಾನದ ಕಾಳಜಿಯೂ, ತರಹೇವಾರಿ ಮತಗಟ್ಟೆಗಳೂ...

ಚುನಾವಣೆಗಳನ್ನು ಕೆಲವರು ಪ್ರಜಾಪ್ರಭುತ್ವದ ಹಬ್ಬ ಎಂದು ಕರೆಯುತ್ತಾರೆ. ಪ್ರಜೆಗಳು ದೇಶದ ಭವಿಷ್ಯವನ್ನು ನಿರ್ಧರಿಸುವ ಚುನಾವಣೆ ಹಾಗೂ ಮತದಾನದ ಬಗ್ಗೆ ಕಾಳಜಿ ವಹಿಸುವುದು ಸರಿಯೇ. ಆದರೆ, ಇತ್ತೀಚಿನ ದಿನಗಳಲ್ಲಿ ಮತದಾನ ಕುರಿತ ಕಾಳಜಿ ಅತಿ ಎನ್ನಿಸುವ ಮಟ್ಟಕ್ಕೆ ಹೋಗುತ್ತಿದೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತಿದೆ.

ಚುನಾವಣಾ ಆಯೋಗದ ಸೂಚನೆಯಂತೆ ಮೊದಲು ಪಿಂಕ್ ಮತಗಟ್ಟೆಗಳನ್ನು ಸ್ಥಾಪಿಸಲಾಯಿತು. ಮಹಿಳಾ ಮತದಾರರನ್ನು ಗೌರವಿಸುವ ಉದ್ದೇಶದಿಂದ ಈ ರೀತಿಯ ಮತಗಟ್ಟೆಗಳ ಸ್ಥಾಪನೆ ಎನ್ನಲಾಯಿತು. ನಂತರ ಯುವ ಮತಗಟ್ಟೆಗಳನ್ನು ಸ್ಥಾಪಿಸುವುದಾಗಿ ತಿಳಿಸಲಾಗಿದೆ. ಈ ನಡುವೆ, ವಿಕಲಚೇತನ ಮತಗಟ್ಟೆಗಳ ಸ್ಥಾಪಿಸುವುದಾಗಿಯೂ ಹೇಳಲಾಗಿದೆ.

ಈ ನಡುವೆ, ದೇಶದ ಸಂಸ್ಕೃತಿ ಬಿಂಬಿಸುವ ಸಲುವಾಗಿ ಯತ್ನಿಕ್ ಮತಗಟ್ಟೆಯನ್ನು ಬಂಜಾರ ಸಮುದಾಯ ಹೆಚ್ಚಾಗಿರುವ ಕಡೆ ಸ್ಥಾಪಿಸುವ ವರದಿಗಳು ಬಂದಿವೆ. ಇದು ಇಲ್ಲಿಗೇ ನಿಲ್ಲಲಿದೆಯೇ? ಗೊತ್ತಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಬೇರೆ ಬೇರೆ ಸಮುದಾಯಗಳು ಹಾಗೂ ವಲಯಗಳವರು ತಮಗಾಗಿ ಮತಗಟ್ಟೆ ಸ್ಥಾಪಿಸಿ ಎಂದು ಬೆನ್ನು ಹತ್ತಿದರೆ ಕಷ್ಟ.



ಈ ನಡುವೆ, ಚುನಾವಣಾ ಆಯೋಗ ಮತದಾನದ ಪ್ರಮಾಣ ಹೆಚ್ಚಿಸುವ ಬಗ್ಗೆಯೂ ಕಾಳಜಿ ವಹಿಸುತ್ತಿದೆ. ಇದಕ್ಕಾಗಿ ಸ್ವೀಪ್ ಅಭಿಯಾನ ದಡಿ ಪ್ರಚಾರ ಕಾರ್ಯ ನಡೆಸಲಾಗುತ್ತಿದೆ. ವಿಪರ್ಯಾಸ ಎಂದರೆ, ಇದುವರೆಗೆ ನಡೆದ ಚುನಾವಣೆಗಳಲ್ಲಿ ಅನಕ್ಷರಸ್ಥರು ಹಾಗೂ ಗ್ರಾಮೀಣರೇ ಅತಿ ಹೆಚ್ಚಿನ ಮತದಾನ ಮಾಡಿದ್ದಾರೆ. ನಗರ ಪ್ರದೇಶಗಳಲ್ಲಿ ಅಕ್ಷರಸ್ಥರು ಹಾಗೂ ಶ್ರೀಮಂತರು ಹೆಚ್ಚಾಗಿರುವ ಪ್ರದೇಶಗಳಲ್ಲೇ ಮತದಾನ ಕಡಿಮೆ.

ಹೀಗಾಗಿ ಮತದಾನ ಕಡಿಮೆಯಾಗಲು ಜಾಗೃತಿಯ ಕೊರತೆ ಖಂಡಿತಾ ಕಾರಣವಲ್ಲ. ಹೀಗಿರುವಾಗ ಜಾಗೃತ ಸುಶಿಕ್ಷಿತ ಮತದಾರರನ್ನು ಇನ್ನೆಷ್ಟು ಜಾಗೃತಗೊಳಿಸಲು ಸಾಧ್ಯ? ಅಲ್ಲದೇ ಸಾಮಾಜಿಕ ಮಾಧ್ಯಮ ಹಾಗೂ ಮಾಹಿತಿ ಕ್ರಾಂತಿಯ ಈ ಕಾಲದಲ್ಲಿ ಚುನಾವಣೆ ಬಗ್ಗೆ ಜನರಿಗೆ ತಿಳಿಯದಿರುವುದೇನೂ ಇಲ್ಲ.

ಚುನಾವಣಾ ಆಯೋಗ ಈ ಬಾರಿ ವಿಕಲಚೇತನರು ಹಾಗೂ 80 ವರ್ಷ ಮೀರಿದವರಿಗೆ ಮನೆಯಿಂದಲೇ ಮತದಾನಕ್ಕೆ ಅವಕಾಶ ಕಲ್ಪಿಸುತ್ತಿದೆ. ಮತದಾನದ ಪ್ರಮಾಣ ಹೆಚ್ಚಿಸಲು ಈ ಕ್ರಮ ಎನ್ನಲಾಗುತ್ತಿದೆ. ವಾಸ್ತವಿಕವಾಗಿ ಚುನಾವಣಾ ಆಯೋಗದ ಕೆಲಸ ಉತ್ತಮ ಮತಪಟ್ಟಿ ರೂಪಿಸುವುದು ಹಾಗೂ ಉತ್ತಮವಾಗಿ ಚುನಾವಣೆ ನಡೆಸುವುದಾಗಿದೆ. ಈಗ ಮತದಾನ ಪ್ರಮಾಣದ ಹೊಣೆಯನ್ನೂ ಆಯೋಗ ಹೊತ್ತುಕೊಳ್ಳುವುದು (4ನೇ ಪುಟಕ್ಕೆ)

### 'ವಿಕೋಪ'ದ ನಡುವೆ ಚುನಾವಣೆ!

ತಾಪಮಾನ ಹೆಚ್ಚಳ ಭಾರತಕ್ಕೆ ಮುಂಬರುವ ದಿನಗಳಲ್ಲಿ ಅತಿ ದೊಡ್ಡ ಸಮಸ್ಯೆಯಾಗಲಿದೆ ಎಂದು ಹಲವಾರು ವಿಜ್ಞಾನಿಗಳು ಹಾಗೂ ಪರಿಣಿತರು ತಿಳಿಸಿದ್ದಾರೆ. ಈ ವರ್ಷದ ಬೇಸಿಗೆಯಲ್ಲಿ ತಾಪಮಾನ ದಾಖಲೆ ಮಟ್ಟದಲ್ಲಿರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಬಿಸಿಲೂ ಅದೇ ಮಟ್ಟದಲ್ಲಿದೆ.

ಆದರೆ, ಕರ್ನಾಟಕದಲ್ಲಿ ತಾಪಮಾನ ಅತಿ ಹೆಚ್ಚಾಗಿರುವ ದಿನಗಳಲ್ಲೇ ಚುನಾವಣೆ ನಡೆಸಲಾಗುತ್ತಿದೆ! ಮಳೆಗಾಲದ ದಿನಗಳನ್ನು ಸಾಮಾನ್ಯವಾಗಿ ವಿಕೋಪದ ದಿನಗಳೆಂದು ಪರಿಗಣಿಸಲಾಗುತ್ತದೆ. ಆದರೆ, ತ್ರಿಪುರ ರಾಜ್ಯ ಮೊನ್ನೆಯಷ್ಟೇ ಬಿಸಿ ಗಾಳಿ, ಬಿಸಿಲ ಆಘಾತ ಹಾಗೂ ಬಿಸಿಲ ಸುಡುವಿಕೆಯನ್ನು ವಿಕೋಪಗಳೆಂದು ಪರಿಗಣಿಸಿದೆ. ಇದು ಪರಿಸ್ಥಿತಿಯ ಗಂಭೀರತೆ ತೋರುತ್ತದೆ.

ಮಳೆಗಾಲದಲ್ಲಿ ಚುನಾವಣೆಗಳನ್ನು ನಡೆಸುವ ಪದ್ಧತಿ ಇಲ್ಲ. ಹೀಗಿರುವಾಗ ಕಡು ಬಿಸಿಲು ಅತಿ ಹೆಚ್ಚಾಗಿರುವ ದಿನಗಳಲ್ಲಿ ಚುನಾವಣೆ ನಡೆಸುವುದು ಎಷ್ಟರ ಮಟ್ಟಿಗೆ ಸರಿ? ಇನ್ನು ಮುಂದಿನ ದಿನಗಳಲ್ಲಾದರೂ, ಚುನಾವಣಾ ಆಯೋಗ ಬೇಸಿಗೆಯ ದಿನಗಳಲ್ಲಿ ಚುನಾವಣೆಗೆ ಮುಂದಾಗುವ ಪ್ರವೃತ್ತಿ ನಿಲ್ಲಿಸಬೇಕಿದೆ.


24ನೇ ವರ್ಷದ ಪುಣ್ಯಸ್ಮರಣೆ





ದಿ|| ಶ್ರೀ ಸಿದ್ದೇಶ್ ನಾಡಿಗರ್
ಮರಣ : 27.04.1999
ನೀವು ನಮ್ಮನ್ನಗಲಿ ಇಂದಿಗೆ 24 ವರ್ಷ ಕಳೆದಿವೆ. ನಿಮ್ಮ ಪ್ರೀತಿ, ಮಮತೆ, ಸವಿನೆನಪು ನಮ್ಮೆಲ್ಲರನ್ನು ಸದಾ ಕಾಡುತ್ತಿರುತ್ತದೆ.
ಸದಾ ನಿಮ್ಮ ಸ್ಮರಣೆಯಲ್ಲಿರುವ...
ಶ್ರೀ ಶಿವದೇವಪ್ಪ ಮತ್ತು ಶ್ರೀಮತಿ ಶಾರದಮ್ಮ
ಶ್ರೀ ರುದ್ರೇಶ ನಾಡಿಗರ್ ಮತ್ತು ಶ್ರೀಮತಿ ಸೌಮ್ಯ
ಶ್ರೀ ತರುಣ ನಾಡಿಗರ್, ನಾಡಿಗರ್ ವಂಶಸ್ಥರು ಹಾಗೂ ಬಂಧು-ಮಿತ್ರರು, ಶಿರಮಗೊಂಡನಹಳ್ಳಿ, ದಾವಣಗೆರೆ.

# ಎಸ್.ವಿ.ಆರ್. ಪರ ಕಿಚ್ಚ ಸುದೀಪ್ ರೋಡ್ ಶೋ



ಜಗಳೂರು

ಜಗಳೂರು, ಏ.26- ಉತ್ತಮ ವ್ಯಕ್ತಿತ್ವವುಳ್ಳ ಶಾಸಕ ಎಸ್.ವಿ.ರಾಮಚಂದ್ರ ಅವರನ್ನು ಮತ್ತೊಮ್ಮೆ ಗೆಲ್ಲಿಸಿ ಎಂದು ಹೆಸರಾಂತ ಚಿತ್ರ ನಟ ಸುದೀಪ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಮಹಾತ್ಮಗಾಂಧಿ ವೃತ್ತದ ವರೆಗೆ ಬಿಜೆಪಿ ಅಭ್ಯರ್ಥಿ ಎಸ್.ವಿ.ರಾಮಚಂದ್ರ ಅವರ ಪರ ಅದ್ಧೂರಿ ರೋಡ್ ಶೋ ನೊಂದಿಗೆ ಮತ ಯಾಚಿಸಿದರು.

**ಪಕ್ಷ ಮುಖ್ಯವಲ್ಲ ವ್ಯಕ್ತಿ ಮುಖ್ಯ:** ನಾನು ಸಿನಿಮಾ ಚಿತ್ರೀಕರಣದಲ್ಲಿ ತಲ್ಲೀನನಾಗಿದ್ದೆ. ಇದೀಗ ಬಹುದಿನಗಳ ನಂತರ ರೋಡ್ ಶೋ ನಲ್ಲಿ ಭಾಗವ ಹಿಸಿರುವುದು ಸಂತಸ ತಂದಿದೆ. ನಿಮ್ಮ ಪ್ರೀತಿ, ಅಭಿಮಾನಕ್ಕೆ ಚಿರ ಋಣಿ ಯಾಗಿರುವೆ ಎಂದರು.

ನನಗೆ ಪಕ್ಷ ಮುಖ್ಯವಲ್ಲ ವ್ಯಕ್ತಿ ಮುಖ್ಯ. ಎಸ್.ವಿ.ರಾಮಚಂದ್ರ ಅವರು ಉತ್ತಮ ಆತ್ಮೀಯ ಒಡನಾಡಿಯಾಗಿದ್ದಾರೆ. ಅವರನ್ನು ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸಬೇಕು. ನಾನು ಇನ್ನೊಮ್ಮೆ ಆಗಮಿಸಿ ಸಂಭ್ರಮ ಆಚರಿಸೋಣ ಎಂದರು.

ಸುದೀಪ್ ಅವರು ಹೆಲಿಕ್ಯಾಪ್ಟರ್ ನಿಂದ ಇಳಿದು ತೆರೆದ ವಾಹನಕ್ಕೆ ಆಗಮಿಸುತ್ತಿದ್ದಂತೆ ಹೂವಿನಮಾಲೆ, ಸೇಬು ಹಣ್ಣಿನ ಮಾಲೆ ಹಾಕಿ ಸ್ವಾಗತಿಸಿದರು. ಆಗ ಕಿಕ್ಕಿರಿದ ಸಂಖ್ಯೆಯ ಅಭಿಮಾನಿಗಳು ವಾಹನದ ಸುತ್ತಲೂ ಸುದೀಪ್ ಭಾವಚಿತ್ರ, ಬಾವುಟಗಳೊಂದಿಗೆ ಮುಗಿಬಿದ್ದರು.

ಕಿಚ್ಚ ಕಿಚ್ಚ ಎಂಬ ಘೋಷಣೆಗಳು ಮೊಳಗಿದವು. ಸುದೀಪ್ ಕೈಬೀಸುತ್ತಿದ್ದಂತೆ ಸೇಬು ಹಣ್ಣಿನ ಹಾರದಲ್ಲಿರುವ ಹಣ್ಣುಗಳನ್ನು ಎಸೆದು ಅಭಿಮಾನಿಗಳು ಸಂಭ್ರಮಿಸಿದರು. ಸುದೀಪ್ ಅವರೂ ಅಭಿಮಾನಿಗಳ ಜೈಕಾರಕ್ಕೆ ಸಾಥ್ ನೀಡಿದರು. ರಸ್ತೆಯುದ್ದಕ್ಕೂ ಪಟಾಕಿ ಸಿಡಿಸಿ, ಹರ್ಷೋದ್ಗಾರ ವ್ಯಕ್ತಪಡಿಸಿದರು.

ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಕ್ಷೇತ್ರದಲ್ಲಿ ಸುದೀಪ್ ಅಭಿಮಾನಿಗಳು ಹೆಚ್ಚಿದ್ದಾರೆ. ಕಿಚ್ಚನ ಅಭಿಮಾನಿ ಬಳಗದ ಬಹುದಿನ ಗಳ ಒತ್ತಾಸೆಯಂತೆ ಸುದೀಪ್ ಅವರನ್ನು ಇಂದಿನ ಚುನಾವಣೆ ಪ್ರಚಾರದ ರೋಡ್ ಶೋನಲ್ಲಿ ಆಹ್ವಾನಿಸಿರುವೆ. ಅವರೂ ನನ್ನ ಮೇಲಿನ ಆತ್ಮೀಯತೆಯಿಂದ ಇಂದು ಆಗಮಿಸಿದ್ದಾರೆ. ಸ್ವಯಂಪ್ರೇರಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕ್ಷೇತ್ರದ ಜನರು ಆಗಮಿಸಿರುವುದು ನನಗೆ ಗೆಲುವಿನ ವಿಶ್ವಾಸ ಹೆಚ್ಚಿಸಿದೆ. ಕ್ಷೇತ್ರದ ಮತದಾರರ ಆಶೀರ್ವಾದ ನನ್ನ ಮೇಲಿದೆ. ಕಮಲದ ಗುರುತಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಉಸ್ತುವಾರಿ ಆರುಂಡಿ ನಾಗರಾಜ್, ಶಾಸಕರ ಪತ್ನಿ ಇಂದಿರಾ ರಾಮಚಂದ್ರ, ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್, ಜಿಲ್ಲಾ ಉಪಾಧ್ಯಕ್ಷ ಡಿ.ವಿ.ನಾಗಪ್ಪ, ಮುಖಂಡರಾದ ಸೊಕ್ಕೆ ನಾಗರಾಜ್, ಬಿಸ್ತುವಳ್ಳಿ ಬಾಬು ಭಾಗವಹಿಸಿದ್ದರು.



## ಜಿಲ್ಲಾಡಳಿತದಿಂದ ಶ್ರೀ ಶಂಕರಾಚಾರ್ಯರ ಜಯಂತಿ ಆಚರಣೆ

ದಾವಣಗೆರೆ, ಏ. 26 - ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಶ್ರೀ ಶಂಕರಚಾರ್ಯರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರು ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಹಿಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣಾ ಇಲಾಖೆಯ ಉಪ ನಿರ್ದೇಶಕರಾದ ವಾಸಂತಿ ಉಪ್ಪಾರ್, ಜಿಲ್ಲಾ ಶಂಕರ ಸೇವಾ ಸಂಘದ ಅಧ್ಯಕ್ಷ ಡಾ.ಬಿ.ಟಿ. ಅಚ್ಯುತ್, ಉಪಾಧ್ಯಕ್ಷ ಗಿರೀಶ್ ನಾಡಿಗ್, ವಿನಾಯಕ ಜೋಶಿ, ಬಾಲಕೃಷ್ಣ ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

## 157 ನರ್ಸಿಂಗ್ ಕಾಲೇಜುಗಳ ಸ್ಥಾಪನೆಗೆ ಕೇಂದ್ರದ ಒಪ್ಪಿಗೆ

**(1ನೇ ಪುಟದಿಂದ)** ಕೈಗೆಟಕುವ ದರದಲ್ಲಿ ನರ್ಸಿಂಗ್ ಶಿಕ್ಷಣ ನೀಡುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ. ವೈದ್ಯಕೀಯ ಕಾಲೇಜುಗಳ ಆವರಣದಲ್ಲೇ ನರ್ಸಿಂಗ್ ಕಾಲೇಜು ಗಳನ್ನು ಸ್ಥಾಪಿಸುವುದ ರಿಂದ ಈಗಿರುವ ಮೂಲಭೂತ ಸೌಲಭ್ಯ, ಪ್ರಯೋಗಾಲಯ, ಚಿಕಿತ್ಸಾ ಸೌಲಭ್ಯ ಹಾಗೂ ಬೋಧಕ ಸಿಬ್ಬಂದಿ ಯನ್ನು ಸಶಕ್ತವಾಗಿ ಬಳಸಿಕೊಳ್ಳಲು ಸಾಧ್ಯವಾಗಲಿದೆ ಎಂದವರು ಹೇಳಿದ್ದಾರೆ.

## ವಾಸವಿ ಜಯಂತಿ : ನಗರದಲ್ಲಿ ಇಂದು ಸಾಂಸ್ಕೃತಿಕ ಕಾರ್ಯಕ್ರಮ



ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ವತಿಯಿಂದ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ವಾಸವಾಂಬ ಜಯಂತ್ಯೋತ್ಸವವು ನಿನ್ನೆ ಆರಂಭವಾಗಿದ್ದು, ಇದೇ ದಿನಾಂಕ 30ರವರೆಗೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ. ಪ್ರತಿದಿನ ಬೆಳಿಗ್ಗೆಯಿಂದ ಸಂಜೆಯವರೆಗೆ ಶ್ರೀ ಅಮ್ಮನವರಿಗೆ ಕುಂಕುಮಾರ್ಚನೆ, ಮಂಗಳಾರತಿ, ತೀರ್ಥ - ಪ್ರಸಾದ ವಿನಿಯೋಗ ನಡೆಯಲಿದ್ದು, ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಇಂದು ಸಂಜೆ 6.30 ಕ್ಕೆ ವಾಸವಿ ಕ್ಲಬ್ ಇವರಿಂದ ಹಳ್ಳಿ ಸೊಬಗು ಕಾರ್ಯಕ್ರಮ ನೆರವೇರಲಿದೆ.

ನಾಳೆ ಶುಕ್ರವಾರ ಸಂಜೆ 6 ರಿಂದ ವಾಸವಿ ಮಹಿಳಾ ಸಂಘ, ವಾಸವಿ ಯುವತಿಯರ ಸಂಘ ಮತ್ತು ವಾಸವಿ ಭಜನಾ ಮಂಡಳಿ ಇವರಿಂದ ಅಮ್ಮನವರಿಗೆ 108 ವಿವಿಧ ಭಕ್ಷ್ಯಗಳಿಂದ ವಿಶೇಷ ನೈವೇದ್ಯ, ಆರ್ಯವೈಶ್ಯ ಭಕ್ತಾದಿಗಳು ತಂದಂತಹ ವಿವಿಧ ಭಕ್ಷಗಳನ್ನು ಅಮ್ಮನವರಿಗೆ ಸಂಕಲ್ಪ ಪೂರ್ವಕದೊಂದಿಗೆ ತಮ್ಮ ಸ್ವಹಸ್ತದಿಂದ ಅರ್ಪಿಸಲು ಅವಕಾಶ ಕಲ್ಪಿಸಲಾಗಿದ್ದು, ವಿವರಗಳಿಗೆ ಶ್ರೀಮತಿ ಕವಿತಾ ಕೃಷ್ಣಮೂರ್ತಿ (99358 00504) ಅವರನ್ನು ಸಂಪರ್ಕಿಸಬಹುದಾಗಿದೆ.

ಸಂಜೆ 6.30ಕ್ಕೆ ವಾಸವಿ ಮಹಿಳಾ ಸಂಘ ಮತ್ತು ವಾಸವಿ ಯುವತಿಯರ ಸಂಘ ಇವರಿಂದ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ವೇಷಭೂಷಣದೊಂದಿಗೆ ಕನ್ನಿಕೆಯರ ಪೂಜೆ 5 ವರ್ಷದಿಂದ 10 ವರ್ಷದ ಮಕ್ಕಳಿಗೆ ನಡೆಯಲಿದೆ. ವಿವರಗಳಿಗೆ ಶ್ರೀಮತಿ ಕವಿತಾ ಕೃಷ್ಣಮೂರ್ತಿ (99458 00504) ಅವರನ್ನು ಸಂಪರ್ಕಿಸಬಹುದಾಗಿದೆ.

## ದೇಶೀಯ ಉಪಕರಣಗಳ ನೀತಿಗೆ ಅಸ್ತು

**(1ನೇ ಪುಟದಿಂದ)** ನೀಡಿರುವ ಕೇಂದ್ರ ವೈದ್ಯಕೀಯ ಸಚಿವ ಮನ್‌ಸುಖ್ ಮಾಂಡವೀಯ, ದೇಶದಲ್ಲಿ ವೈದ್ಯಕೀಯ ಉಪಕರಣಗಳ ಬೇಡಿಕೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ದೇಶೀಯ ಉತ್ಪನ್ನಗಳಿಗೆ ಉತ್ತೇಜನ ನೀಡಬೇಕಿದೆ ಎಂದರು.

# ಬಿಜೆಪಿ ದುರಾಡಳಿತದಿಂದ ವಿಧಾನಸೌಧದ ಗೋಡೆ ಗೋಡೆಗಳಲ್ಲಿ ಲಂಚದ ಪ್ರತಿಧ್ವನಿ

### ಹಡಗಲಿಯಲ್ಲಿನ ಕಾಂಗ್ರೆಸ್ ಪ್ರಚಾರದಲ್ಲಿ ಕಿಡಿ ಕಾರಿದ ಮಾಜಿ ಸಿಎಂ ಸಿದ್ದರಾಮಯ್ಯ



ಹೂವಿನಹಡಗಲಿ, ಏ. 26 - ಕಳೆದ ನಾಲ್ಕು ವರ್ಷಗಳ ಬಿಜೆಪಿ ಆಡಳಿತದಲ್ಲಿ ವಿಧಾನಸೌಧದ ಗೋಡೆ ಗೋಡೆಗಳಲ್ಲಿ ಲಂಚ ಪ್ರತಿಧ್ವನಿಸುತ್ತಿದೆ ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಬಸವರಾಜ ಬೊಮ್ಮಾಯಿ ಆಡಳಿತದಲ್ಲಿ 40% ಲಂಚ ಪಡೆಯಲಾಗುತ್ತಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಯ್ಯ ಹಲವು ಬಾರಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದರೂ ಪ್ರಯೋಜನವಾಗಲಿಲ್ಲ ಎಂದರು.

ಈ ಭ್ರಷ್ಟಾಚಾರಕ್ಕೆ ನರೇಂದ್ರ ಮೋದಿಯ ವರು ಪರೋಕ್ಷವಾಗಿ ಬೆಂಬಲಿಸುತ್ತಿದ್ದಾರೆ. ನಾನು ಬಸವರಾಜ ಬೊಮ್ಮಾಯಿ ಭ್ರಷ್ಟ ಮುಖ್ಯಮಂತ್ರಿ ಎಂದು ಹೇಳಿದ್ದೇನೆ. ಇದನ್ನು ಬಿಜೆಪಿಯವರು ತಿರುಚಿ ಲಿಂಗಾಯತ ಮುಖ್ಯಮಂತ್ರಿಗಳು ಭ್ರಷ್ಟರು ಎಂದು ಸಾಮಾಜಿಕ ಜಾಲಗಳಲ್ಲಿ ಬಿಂಬಿಸುತ್ತಿದ್ದಾರೆ ಎಂದು ಆರೋಪಿಸಿದರು.

ನಿಜಲಿಂಗಪ್ಪ, ವೀರೇಂದ್ರ ಪಾಟೀಲ್, ಜೆ.ಹೆಚ್. ಪಟೇಲ್ ಅವರು ಮುಖ್ಯಮಂತ್ರಿಗಳಾಗಿ ರಾಜ್ಯಕ್ಕೆ ಕೀರ್ತಿಯನ್ನು ತಂದಿದ್ದಾರೆ. ನಾನು ಲಿಂಗಾಯತ ದ್ವೇಷಿಯಲ್ಲ, ಬಸವ ತತ್ವಗಳನ್ನು ನಂಬಿದವನು. ಲಿಂಗಾಯತರ ಬಗ್ಗೆ ನನಗೆ ಅಪಾರ ಗೌರವ ಮತ್ತು ಅಭಿಮಾನ ಇದೆ ಎಂದು ತಿಳಿಸಿದರು. ನಾನು ಮುಖ್ಯಮಂತ್ರಿ ಆಗಿದ್ದಾಗ ಬಡವರಿಗೆ ತಲಾ 7 ಕೆಜಿ ಅಕ್ಕಿಯನ್ನು ಕೊಟ್ಟಿದ್ದೆ. ಆದರೆ, ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ತಲಾ ಐದು ಕೆಜಿ ಅಕ್ಕಿಯನ್ನು ಕೊಡುತ್ತಿದೆ. ಆವತ್ತು ನಮ್ಮ ಸರ್ಕಾರ ಬಡವರಿಗೆ 15 ಲಕ್ಷ ಸೂರುಗಳನ್ನು ಕೊಟ್ಟಿತ್ತು. ಆದರೆ, ಬಿಜೆಪಿ ಸರ್ಕಾರದಿಂದ ಇವತ್ತು ನೂರು ಮನೆಗಳನ್ನು ಕೊಡುವುದಕ್ಕೆ ಆಗಲಿಲ್ಲ ಎಂದು ಟೀಕಿಸಿದರು.

## ರಕ್ಷಣಾ ವೆಚ್ಚದಲ್ಲಿ ಭಾರತಕ್ಕೆ 4ನೇ ಸ್ಥಾನ

**(1ನೇ ಪುಟದಿಂದ)** ಇನ್‌ಸ್ಟಿಟ್ಯೂಟ್ (ಎಸ್‌ಐ ಪಿಆರ್‌ಐ) ತಿಳಿಸಿದೆ. ರಕ್ಷಣಾ ವೆಚ್ಚದಲ್ಲಿ ಶೇ.23 ರಷ್ಟನ್ನು ಗಡಿಯಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಬಳಸಲಾ ಗಿದೆ. ಆದರೆ, ಬಹುತೇಕ ಹಣ ವೇತನ ಹಾಗೂ ಪಿಂಚಣಿಗೆ ಬಳಕೆ ಯಾಗಿದೆ ಎಂದು ವರದಿ ತಿಳಿಸಿದೆ. ವಿಶ್ವದ ಒಟ್ಟು ರಕ್ಷಣಾ ವೆಚ್ಚದಲ್ಲಿ ಅಮೆರಿಕ ಮೊದಲ ಸ್ಥಾನದಲ್ಲಿದೆ. ವಿಶ್ವದ ಒಟ್ಟು ರಕ್ಷಣಾ ವೆಚ್ಚದಲ್ಲಿ ಅಮೆರಿಕ ಶೇ.39ರಷ್ಟು ಪಾಲು ಹೊಂದಿದೆ. ಚೀನಾ ಶೇ.13, ರಷ್ಯಾ ಶೇ.3.9, ಭಾರತ ಶೇ.3.6 ಹಾಗೂ ಸೌದಿ ಅರೇಬಿಯಾ ಶೇ.3.3ರಷ್ಟು ಖರ್ಚು ಮಾಡುತ್ತಿವೆ.

## ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷರಾಗಿ ಡಾ. ಎಸ್. ಮಹೇಶ್





ದಾವಣಗೆರೆ, ಏ. 26- ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಸ್ಥಳೀಯ ಶಾಖೆಯ ಅಧ್ಯಕ್ಷರಾಗಿ ದೊಡ್ಡಬಾತಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಎಸ್. ಮಹೇಶ್ ಆಯ್ಕೆಯಾಗಿದ್ದಾರೆ.

ನಗರ ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆ ನಂ. 3 ವೈದ್ಯಾಧಿಕಾರಿ ಡಾ. ಎಸ್. ಎಂ. ರಾಘವೇಂದ್ರ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಖಜಾಂಚಿಯಾಗಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ನಂ. 2 ವೈದ್ಯಾಧಿಕಾರಿ ಡಾ. ಜೆ.ಎಸ್. ನಾಗರಾಜ್, ಉಪಾಧ್ಯಕ್ಷರಾಗಿ ಡಾ. ಡಿ.ಹೆಚ್. ಗೀತಾ, ಡಾ. ಹೆಚ್.ಸಿ. ಸುದೀಪ್ ಕುಮಾರ್, ಸಂಘಟನಾ ಕಾರ್ಯದರ್ಶಿಯಾಗಿ ಡಾ. ತಿಪ್ಪೇಸ್ವಾಮಿ, ಜಂಟಿ ಕಾರ್ಯದರ್ಶಿಯಾಗಿ ಡಾ. ಎನ್.ಎಸ್. ಶ್ರೀನಿವಾಸ್, ಆಂತರಿಕ ಲೆಕ್ಕ ಪರಿಶೋಧಕರಾಗಿ ಡಾ. ಗಿರೀಶ್, ರಾಜ್ಯ ಪ್ರತಿನಿಧಿಯಾಗಿ ಡಾ. ಎಸ್. ರುದ್ರೇಶ್, ಡಾ. ಗಿರೀಶ್ ಹಾಗೂ ದಂತ ವೈದ್ಯಕೀಯ ಪ್ರತಿನಿಧಿಯಾಗಿ ಡಾ. ಟಿ.ಎಸ್. ಸಿದ್ಧರಾಮೇಶ್ವರ ಆಯ್ಕೆಯಾಗಿದ್ದಾರೆ.

**ಕಾರ್ಯಕಾರಿ ಸದಸ್ಯರುಗಳು :** ಡಾ. ಆಶಾ ಭಾನುಪ್ರಕಾಶ್, ಡಾ. ಜಿ.ಎಂ. ಬಸವಂತ್, ಡಾ. ಎಂ. ಶಿವಪ್ರಕಾಶ್, ಡಾ. ಶಿಲ್ಪಾ ನಾಯಕ್, ಡಾ. ಜಿ.ಬಿ. ಚಂದ್ರಪ್ಪ, ಡಾ. ಎಸ್.ಸಿ. ಬಸವರಾಜ್.

**ತಾಲ್ಲೂಕು ಪ್ರತಿನಿಧಿಗಳು :** ಡಾ. ಜೆ. ವಿಶಾಲ್, ಡಾ. ಹೆಚ್.ಜೆ. ನರೇಂದ್ರ, ಡಾ. ಬಿ.ಸಿ. ರಾಘವೇಂದ್ರ, ಡಾ. ಹೆಚ್.ಟಿ. ಲೋಹಿತಾಶ್ವರ, ಡಾ. ಸಿ.ಎಸ್. ಕಾರ್ತಿಕ್ ಆಯ್ಕೆಯಾಗಿದ್ದಾರೆ.

ಸಂಘದ ಕಛೇರಿಯಲ್ಲಿ ಇಂದು ನಡೆದ ಸಂಘದ ಸಾಮಾನ್ಯ ಸಭೆಯಲ್ಲಿ ಈ ಆಯ್ಕೆ ನಡೆಯಿತು.

## ವಕೀಲರ ಸಂಘಕ್ಕೆ ಅಧ್ಯಕ್ಷರಾಗಿ ಅರುಣ್





**(1ನೇ ಪುಟದಿಂದ)** ಗೋಪನಾಳ್ ಅವರು 395 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಅವರ ಪ್ರತಿಸ್ಪರ್ಧಿ ವಿನಯ್ ಕುಮಾರ್ ಸಾಹುಕಾರ್ ಪರಾಭವಗೊಂಡಿದ್ದಾರೆ. ವಿನಯ್ ಕುಮಾರ್ 271 ಮತ್ತು ದೇವಿಕುಮಾರ್ 162 ಮತಗಳನ್ನು ಪಡೆದಿದ್ದಾರೆ. 5 ಮತಗಳು ತಿರಸ್ಕೃತಗೊಂಡಿವೆ.

114 ಮತಗಳ ಅಂತರದಲ್ಲಿ ಎ.ಎಸ್. ಮಂಜುನಾಥ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಎ.ಎಸ್. ಮಂಜುನಾಥ್ 368 ಮತಗಳನ್ನು ಗಳಿಸಿದರೆ, ಅವರ ಪ್ರತಿಸ್ಪರ್ಧಿ ವಿ. ವಸಂತ ಕುಮಾರ್ 254 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ. ಅವರೊಂದಿಗೆ ಕಣದಲ್ಲಿದ್ದ ಶ್ರೀರಾಮ ಕೃಷ್ಣ ಗೌಡ ಈಳಿಗೇರ 76, ಕೆ.ಬಿ.ಗಂಗಾಧರ ನಾಯ್ಕ 75, ಎನ್. ಜಯಣ್ಣ 42 ಮತಗಳನ್ನು ಪಡೆದಿದ್ದಾರೆ. 26 ಮತಗಳು ತಿರಸ್ಕೃತಗೊಂಡಿವೆ.

**ಅವಿರೋಧ ಆಯ್ಕೆ :** ವಕೀಲರ ಸಂಘದ ಕಾರ್ಯಕಾರಿ ಸಮಿತಿಯ ಎಲ್ಲಾ 9 ಸ್ಥಾನಗಳಿಗೂ ಅವಿರೋಧ ಆಯ್ಕೆಯಾಗಿದೆ. ಬಿ. ಅಜ್ಜಯ್ಯ, ಆರ್. ಭಾಗ್ಯಲಕ್ಷ್ಮಿ, ಎಂ. ಚೌಡಪ್ಪ, ಟಿ.ಹೆಚ್. ಮಧುಸೂದನ್, ಹೆಚ್. ನಾಗರಾಜ್, ಕೆ.ಎಂ. ನೀಲಕಂಠಯ್ಯ, ಎಂ. ರಾಘವೇಂದ್ರ, ಜಿ.ಟಿ. ಸಂತೋಷ್ ಕುಮಾರ್ ಮತ್ತು ವಾಗೀಶ್ ಕಟಗಿಹಳ್ಳಿಮಠ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. 2023 - 2025ನೇ ದ್ವೈ ವಾರ್ಷಿಕ ಅವಧಿಗೆ ಈ ಚುನಾವಣೆಯು ಸಂಘದ ಕಚೇರಿಯಲ್ಲಿ ಮೊನ್ನೆ ನಡೆಯಿತು. ಸಂಘದ 1200 ಆಜೀವ ಸದಸ್ಯರ ಪೈಕಿ 846 ಮತದಾರರು ತಮ್ಮ ಹಕ್ಕು ಚಲಾಯಿಸಿದರು.

ಸಂಘದ ಹಿರಿಯ ನ್ಯಾಯವಾದಿ ಎಲ್.ದಯಾನಂದ್ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

## ಆಯುರ್ವೇದ ವೈದ್ಯರಿಗೆ ಸಮ ವೇತನವಿಲ್ಲ

**(1ನೇ ಪುಟದಿಂದ)** ಪರಿಗಣಿಸಬಹುದಾಗಿದೆ. ಆದರೆ, ಎರಡೂ ವರ್ಗದ ವೈದ್ಯರು ಸಮಾನ ಕೆಲಸ ಮಾಡುತ್ತಿಲ್ಲ. ಹೀಗಾಗಿ ಸಮಾನ ವೇತನ ಕೇಳಲಾಗದು ಎಂದು ನ್ಯಾಯಾಲಯ ತಿಳಿಸಿದೆ.

## ಸ್ವೀಪ್ ಸಮಿತಿಯಿಂದ ಬೋಟಿಂಗ್ ಮೂಲಕ ಮತದಾನ ಜಾಗೃತಿ ಅಭಿಯಾನ


ಚನ್ನಗಿರಿ, ಏ. 26- ಭಾರತ ಸಂವಿಧಾನ ಪ್ರಜೆಗಳಿಗೆ ಮತದಾನದ ಹಕ್ಕನ್ನು ನೀಡಿದೆ. ಮತದಾನ ಹಕ್ಕು ಮಾತ್ರವಲ್ಲದೇ ಜವಾಬ್ದಾರಿ ಸಹ ಆಗಿದೆ. ಮತದಾನ ಮಾಡದೇ ಜನಪ್ರತಿನಿಧಿಗಳನ್ನು ದೂಷಿಸುವುದು ಸರಿಯಲ್ಲ ಎಂದು ಜಿಲ್ಲಾ ಪಂಚಾಯತ್‌ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಹಿಟ್ನಾಳ್ ತಿಳಿಸಿದರು.

ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ದಂತೆ ಚನ್ನಗಿರಿ ತಾಲ್ಲೂಕು ಶಾಂತಿಸಾಗರದಲ್ಲಿ ಮತದಾನ ಜಾಗೃತಿ ಅಭಿಯಾನ ಭಾಗವಾಗಿ ಭಾನುವಾರ ಆಯೋಜಿಸಿದ್ದ ಸಾಹಸ ಜಲ ಕ್ರೀಡೆಯಲ್ಲಿ ಭಾಗವಹಿಸಿ, ಅಭಿಯಾನ ಉದ್ದೇಶಿಸಿ ಅವರು ಮಾತನಾಡಿದರು.

ಮತದಾನದ ಜವಾಬ್ದಾರಿಯಿಂದ ನುಣುಚಿ ಕೊಂಡು ಆಶೋತ್ತರಗಳನ್ನು ಈಡೇರಿಸದವರನ್ನು ದೂಷಿಸುವುದು ತರವಲ್ಲ, ಪ್ರತಿಯೊಬ್ಬರು ತಮ್ಮ ಹಕ್ಕನ್ನು ಚಲಾಯಿಸಿ ಪ್ರಶ್ನಿಸುವ ಹಕ್ಕನ್ನು ಪಡೆಯ ಬಹುದು ಎಂದರು. ಕಳೆದ ಚುನಾವಣೆಯಲ್ಲಿ ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಶೇ.79.91ರಷ್ಟು ಮತದಾನ ಪ್ರಮಾಣ ದಾಖಲಾಗಿದೆ. ಪ್ರಸಕ್ತ ಚುನಾವಣೆಯಲ್ಲಿ ಶೇ.90ರಷ್ಟು ಮತದಾನದಲ್ಲಿ ಪಾಲ್ಗೊಳ್ಳಬೇಕು. ಯಾವುದೇ ಆಮಿಷಕ್ಕೆ ಒಳಗಾಗದೆ ಪ್ರಜ್ಞಾವಂತರಾಗಿ ಮತದಾನ ಮಾಡಬೇಕು ಎಂದು ತಿಳಿಸಿದರು.



## ಮಲೇಬೆನ್ನೂರಿನಲ್ಲಿ ಇಂದು ಕಾಳಿಕಾದೇವಿ ಶಿಲಾಮೂರ್ತಿ ಪ್ರತಿಷ್ಠಾಪನೆ, ನಾಳೆ ಉಪನಯನ

ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಕಾಳಿಕಾದೇವಿಯ ನೂತನ ಶಿಲಾಮೂರ್ತಿಯ ಪುನರ್ ಪ್ರತಿಷ್ಠಾಪನೆ ಮತ್ತು ಅಷ್ಟಬಂಧ ಬ್ರಹ್ಮ ಕಲಶೋತ್ಸವ ಹಾಗೂ ಸಾಮೂಹಿಕ ಉಪನಯನ, ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಇಂದು ಮತ್ತು ನಾಳೆ ಜರುಗಲಿವೆ.

ಇಂದು ಬೆಳಿಗ್ಗೆ 5 ರಿಂದ 5.30ರವರೆಗೆ ವಿವಿಧ ಪೂಜೆಗಳ ನಂತರ ಕಾಳಿಕಾದೇವಿಯ ನೂತನ ಶಿಲಾ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನಡೆಯಲಿದ್ದು, ಬೆಳಿಗ್ಗೆ 9 ಗಂಟೆಗೆ ಮಹಾಪೂರ್ಣಾಹುತಿ, ಅಗ್ನಿ ಪೂಜೆ, ಕಾಳಿಕಾದೇವಿ ಕಲಶ ಉದ್ಘಾಟನೆ, ಮಹಾಕುಂಭಾಭಿಷೇಕ, ಪಂಚಾಮೃತ ಅಭಿಷೇಕ, ಅಲಂಕಾರ, 10.30ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ಜರುಗುವುದು.

ನಂತರ ಅರೆ ಮಾದನಹಳ್ಳಿಯ ಸುಜ್ಞಾನ ಮಹಾಸಂಸ್ಥಾನ ಮಠದ ಶ್ರೀ ಶಿವ ಸುಜ್ಞಾನ ತೀರ್ಥ ಸ್ವಾಮೀಜಿ ಮತ್ತು ಯಾದಗಿರಿ ಜಿಲ್ಲೆಯ ಶ್ರೀ ಮದಾನೆಗೊಂದಿ ಸಂಸ್ಥಾನ ಸರಸ್ವತಿ ಪೀಠದ ಶ್ರೀ ಕಾಳಹಸ್ತೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಧಾರ್ಮಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಸಂಜೆ 6.30 ರಿಂದ ಶ್ರೀ ಕಾಳಹಸ್ತೇಂದ್ರ ಶ್ರೀಗಳವರಿಂದ ಶ್ರೀ ಮೌನೇಶ್ವರ ಲೀಲಾ ವಿಲಾಸ ಪ್ರವಚನ ಇರುತ್ತದೆ. ನಾಳೆ ಶುಕ್ರವಾರ ಬೆಳಿಗ್ಗೆ 5.30ರಿಂದ 6.30 ರವರೆಗೆ ಸಲ್ಲುವ ಬ್ರಾಹ್ಮೀ ಲಗ್ನದಲ್ಲಿ ವಿಶ್ವಕರ್ಮ ವಟುಗಳ ಸಾಮೂಹಿಕ ಉಪನಯನ, ಜವಳ, ನಂತರ 9 ಗಂಟೆಗೆ ಸಾಮೂಹಿಕ ವಿವಾಹ ನಡೆಯಲಿದೆ. 10.30ಕ್ಕೆ ಉಭಯ ಶ್ರೀಗಳ ಸಾನ್ನಿಧ್ಯದಲ್ಲಿ ಧಾರ್ಮಿಕ ಸಭೆ ನಡೆಯಲಿದೆ.

## ತಾತ್ಕಾಲಿಕ ಸಮಸ್ಯೆಗಳಿಂದ ಹಣದುಬ್ಬರ :ಸೀತಾರಾಮನ್



ಕಲಬುರಗಿ, ಏ. 26 - ಸರಕುಗಳ ಪೂರೈಕೆಯಲ್ಲಿ ತಾತ್ಕಾಲಿಕ ಸಮಸ್ಯೆ ಉಂಟಾಗಿದೆ. ಋತುಮಾನದ ಕಾರಣದಿಂದಾಗಿ ಆಗುವ ಸಮಸ್ಯೆಗಳಿಂದ ಹಣದುಬ್ಬರ ಹೆಚ್ಚಾಗಿದೆ. ಈ ಬಗ್ಗೆ ನಿಗಾ ವಹಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಕೊರೊನಾ ಹಾಗೂ ಉಕ್ರೇನ್ ಸಮರದ ಕಾರಣದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಇಂಧನ ಬೆಲೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಆಮದು ತೆರಿಗೆ ಕಡಿತಗೊಳಿಸಲಾಗಿದೆ ಎಂದವರು ಹೇಳಿದರು.

ಖಾದ್ಯ ತೈಲ, ತರಕಾರಿ ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ ಪೂರೈಕೆ ಮೇಲೆ ನಿಗಾ ವಹಿಸಲಾಗಿದೆ. ಖಾದ್ಯ ತೈಲದ ದರ ಕಡಿಮೆ ಮಾಡುವ ಸಲುವಾಗಿ ಆಮದು ತೆರಿಗೆ ಕಡಿತಗೊಳಿಸಲಾಗಿತ್ತು ಎಂದವರು ತಿಳಿಸಿದರು.

ಈ ಕಾರಣಗಳಿಂದಾಗಿ ಗ್ರಾಹಕರ ಬೆಲೆ ಸೂಚ್ಯಂಕ ಶೇ.6ರಿಂದ ಶೇ.5.7ಕ್ಕೆ ಇಳಿಕೆಯಾಗಿದೆ ಎಂದು ಸಚಿವೆ ತಿಳಿಸಿದರು.

# ಮೂಢನಂಬಿಕೆಗಳಿಂದ ಹೊರ ಬಂದು ವೈಚಾರಿಕ ನಿಲುವು ತಳಿಯಬೇಕು

### ಕದಳಿ ವೇದಿಕೆಯ ಬಸವ ಜಯಂತ್ಯೋತ್ಸವದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ದಾವಣಗೆರೆ, ಏ. 26- ಗುಡಿಗಳಿಂದ ಶೋಷಣೆ ಹೆಚ್ಚುತ್ತಿದೆ. ಶರಣರು ಹೇಳಿದಂತೆ ಕಾಯಕವೇ ಕೈಲಾಸ, ಮೂಢನಂಬಿಕೆಗಳಿಂದ ಹೊರ ಬಂದು ವೈಚಾರಿಕ ನಿಲುವನ್ನು ತಳೆಯಬೇಕು ಹಾಗೂ ವಿಧಾನಸಭಾ ಚುನಾವಣೆ ಬಂದಿದೆ. ಯಾರೂ ಸಹ ಆಮಿಷಕ್ಕೆ ಒಳಗಾಗದೆ, ಮತದಾನ ಮಾಡಬೇಕೆಂದು ಸಾಣೇಹಳ್ಳಿಯ ಶ್ರೀ ಪಂಡಿತಾ ರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ನಗರದ ಕದಳಿ ವೇದಿಕೆ ಹಾಗೂ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ನಡೆದ ಅಕ್ಕಮಹಾದೇವಿ ಜಯಂತಿ ಹಾಗೂ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶ್ರೀಗಳು ಮಾತನಾಡಿದರು.

ಸಾಹಿತಿ ಡಾ. ಬಸವರಾಜ ನೆಲ್ಲಿಸರ ಅವರು ಬಸವಣ್ಣನವರ ವಚನಗಳನ್ನು ಉದಾಹರಿಸಿ, 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರ ಅಂತ್ಯದ ನಿಗೂಢತೆ ಈಗಲೂ ಕಾಡುತ್ತಿದೆ ಎಂದು ತಿಳಿಸಿದರು.

ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಸವ ಮಂಟಪವನ್ನು ಸ್ಥಾಪಿಸಿದಂತಹ ಶರಣೆ ಅನುಸೂಯಾದೇವಿ ಪಾಟೀಲ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ರಾಜ್ಯ ಕದಳಿ ವೇದಿಕೆಯ ಉಪ ಸಂಚಾಲಕರಾದ ಪ್ರಮೀಳಾ ನಟರಾಜ್, ಜಿಲ್ಲಾಧ್ಯಕ್ಷೆ ವಿನೋದ ಅಜಗಣ್ಣನವರ್ ಉಪಸ್ಥಿತರಿದ್ದರು.

ಗಾಯತ್ರಿ ವಸ್ತ್ರದ್ ಕಾರ್ಯಕ್ರಮ ನಿರೂಪಿಸಿದರು. ವಿನೋದಾ ವಂದಿಸಿದರು. ಕದಳಿ ಸಹೋದರಿಯರಿಂದ ವಚನ ಗಾಯನ ಹಾಗೂ ಭಜನೆ ಕಾರ್ಯಕ್ರಮ ನಡೆಯಿತು.



# ಎಸ್ಸೆಸ್ - ಎಸ್ಸೆಸ್ಸೆಂಗೆ ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘದ ಬೆಂಬಲ

ದಾವಣಗೆರೆ, ಏ. 26 - ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಮತ್ತು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ರೈತರ ಫಸಲುಗಳ ಪರಿವರ್ತನ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ ಬೆಂಬಲ ವ್ಯಕ್ತಪಡಿಸಿದೆ.



ಸಂಘದ ಆವರಣದಲ್ಲಿ ಇಂದು ನಡೆದ ಸರಳ ಕಾರ್ಯಕ್ರಮದಲ್ಲಿ ಸಂಘದ ಸದಸ್ಯರಾಗಿರುವ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ಸೂಚಿಸುವ ನಿರ್ಣಯ ಕೈಗೊಳ್ಳಲಾಯಿತು.

ಸಂಘದ ಉಪಾಧ್ಯಕ್ಷ ಎ.ಆರ್. ಸೋಮಶೇಖರಪ್ಪ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಎಸ್ಸೆಸ್ ಅವರನ್ನು ಸನ್ಮಾನಿ ಸುವ ಮೂಲಕ ಬೆಂಬಲ ವ್ಯಕ್ತಪಡಿಸಿ ಉಭಯ ಕ್ಷೇತ್ರಗಳಲ್ಲೂ ಪ್ರಚಾರ ನಡೆಸುವುದಾಗಿ ತಿಳಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಎಸ್ಸೆಸ್, ನಾನು ಮತ್ತು ನನ್ನ ಪುತ್ರ ತೋಟಗಾರಿಕೆ ಮತ್ತು ಎಪಿಎಂಸಿ ಸಚಿವರಾಗಿದ್ದ ಅವಧಿಯಲ್ಲಿ ನೀಡಿದ ಕಾರ್ಯಕ್ರಮಗಳನ್ನು ಮೆಲುಕು ಹಾಕಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ನಿರ್ದೇಶಕ ಬಿ.ಜಿ. ನಾಗರಾಜ್ ಅವರು 1930ರಲ್ಲಿ ಸಿದ್ದವೀರಪ್ಪ ಆರಂಭಿಸಿದ ಈ ಸಂಘವನ್ನು ಶಾಮನೂರು ಕಲ್ಲೇಶಪ್ಪ ಹೆಮ್ಮರವಾಗಿ ಬೆಳೆಸಿದರು ಎಂದು ತಿಳಿಸಿದರು.

ಸ್ಥಳೀಯ ಗ್ಯಾರೇಜ್‌ಗಳು ಮತ್ತು ವಿವಿಧ ಮಳಿಗೆಗಳ ಪರವಾಗಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಮಹ್ಮದ್ ಸಮೀವುಲ್ಲಾ ಮಾತನಾಡಿ, ಎಸ್ಸೆಸ್ ಮತ್ತು ಎಸ್ಸೆಸ್ಸೆಂ ಅವರುಗಳು ದಾವಣಗೆರೆಗೆ ಏಕೆ ಅವಶ್ಯಕ ಎಂಬುದನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಚಿತ್ರದುರ್ಗ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಎಸ್.ಎಸ್.ಬಕ್ಕೇಶ್, ಸಂಘದ ಅಧ್ಯಕ್ಷ ಎಸ್.ಕೆ. ಪವಿತ್ರ, ಸಂಘದ ನಿರ್ದೇಶಕರುಗಳಾದ ಟಿ.ಜೆ. ಶಂಕರಪ್ಪ, ಬಿ. ನಾಗೇಂದ್ರಪ್ಪ, ಎನ್. ಉಮಾಪತಿ, ಆರ್. ಗಂಗಾಧರಪ್ಪ, ಬಿ.ಎಸ್. ನಂಜಪ್ಪ, ಎಸ್. ಧನ್ಯನಾಯ್ಕ, ಶ್ರೀಮತಿ ಹೇಮಾವತಿ, ಸವಿತಾ, ಮೀನಾಕ್ಷಪ್ಪ, ಕೆ.ಜಿ. ವಾಮದೇವಪ್ಪ, ಕಾರ್ಯದರ್ಶಿ ಡಿ.ಎಸ್. ಜಾಧವ್, ಸಿಬ್ಬಂದಿ ವರ್ಗದವರು, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಶಿವಕುಮಾರ್, ಮಹಾ ನಗರ ಪಾಲಿಕೆ ಸದಸ್ಯ ಜಿ. ಎಸ್. ಮಂಜುನಾಥ್, ಅಭಿಜಿತ್ ಶಾಮನೂರು, ಮಂಜುನಾಥ್ ಶಾಮನೂರು, ದೊಗ್ಗಳ್ಳಿ ಬಸವ ರಾಜ್, ರಾಘವೇಂದ್ರಗೌಡ ಮತ್ತಿತರರಿದ್ದರು.

# ಗುಜರಾತಿನ ಜನ ಠಕ್ಕರು ಎಂದ ಬಿಹಾರ ಡಿಸಿಎಂ ವಿರುದ್ಧ ಪ್ರಕರಣ

ಅಹಮದಾಬಾದ್, ಏ. 26 – ಗುಜರಾತಿನ ಜನರನ್ನು ಠಕ್ಕರು ಎಂದು ಟೀಕಿಸಿದ ಆರೋಪದ ಮೇಲೆ ಬಿಹಾರದ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ವಿರುದ್ಧ ಇಲ್ಲಿನ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದೆ.

ಆರ್.ಜೆ.ಡಿ. ನಾಯಕ ತೇಜಸ್ವಿ ಯಾದವ್ ವಿರುದ್ಧ ಸಾಮಾಜಿಕ ಕಾರ್ಯಕರ್ತ ಹಾಗೂ ಉದ್ಯಮಿ ಹರೇಶ್ ಮೆಹ್ತ ಅವರು ಪ್ರಕರಣ ದಾಖಲಿಸಿದ್ದಾರೆ. ಕಳೆದ ಮಾರ್ಚ್ 21ರಂದು ಪಾಟ್ನಾದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ್ದ ಯಾದವ್, ಈಗಿನ ಪರಿಸ್ಥಿತಿಯಲ್ಲಿ ಗುಜರಾತಿಗಳು ಮಾತ್ರ ಠಕ್ಕರು. ಅವರ ವಂಚನೆಯನ್ನು ಕ್ಷಮಿಸಲಾಗುತ್ತಿದೆ. ಅವರು ಎಲ್.ಐ.ಸಿ. ಹಾಗೂ ಬ್ಯಾಂಕುಗಳ ಹಣದೊಂದಿಗೆ ಓಡಿ ಹೋದರೆ ಯಾರು ಹೊಣೆ? ಎಂದು ಪ್ರಶ್ನಿಸಿದ್ದರು. ಇಡೀ ಗುಜರಾತಿ ಸಮುದಾಯವನ್ನು ಠಕ್ಕರು ಎಂದು ಕರೆಯುವ ಮೂಲಕ ತೇಜೋವಧೆ ಮಾಡಲಾಗಿದೆ. ಇದು ಕಾನೂನಿನಡಿ ಶಿಕ್ಷಾರ್ಹ ಎಂದು ಅರ್ಜಿದಾರರು ಹೇಳಿದ್ದಾರೆ.

## ನಾಡಿದ್ದು ತತ್ವ ಶುದ್ಧಿ ಧ್ಯಾನ ಶಿಬಿರ

ದಾವಣಗೆರೆ, ಏ.26- ಇದೇ ದಿನಾಂಕ 29 ರಿಂದ ಮೇ 1 ರ ವರೆಗೆ ಆಚಾರ್ಯ ಚೇತನ್ ಅವರಿಂದ ತತ್ವ ಶುದ್ಧಿ ಧ್ಯಾನ ಶಿಬಿರ ನಡೆಯಲಿದೆ. ಮಾಹಿತಿ ಹಾಗೂ ನೋಂದಣಿಗಾಗಿ ಸಂಪರ್ಕಿಸಿ : www.dhyanayoga.org ಅಥವಾ 9535656163.

# ಕುಸ್ತಿ ಒಕ್ಕೂಟದ ಅಧ್ಯಕ್ಷರ ವಿರುದ್ಧ ಲೈಂಗಿಕ ಪೀಡನೆ ಆರೋಪ

### ಕೋರ್ಟ್ ತಿಳಿಸಿದರೆ ತಕ್ಷಣವೇ ಎಫ್.ಐ.ಆರ್. ಎಂದ ಪೊಲೀಸರು

ನವದೆಹಲಿ, ಏ. 26 - ಭಾರತೀಯ ಕುಸ್ತಿ ಒಕ್ಕೂಟ (ಡಬ್ಲ್ಯೂ.ಎಫ್.ಐ.)ದ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ತಕ್ಷಣವೇ ಎಫ್.ಐ.ಆರ್. ದಾಖಲಿ ಸಬೇಕು ಎಂದು ಸುಪ್ರೀಂ ಕೋರ್ಟ್ ಭಾವಿಸಿದರೆ, ಅದೇ ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ದೆಹಲಿ ಪೊಲೀಸರು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಎದುರು ಪೊಲೀಸರ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ, ಕೆಲ ವಿಷಯಗಳ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದ ನಂತರ ಎಫ್.ಐ.ಆರ್. ದಾಖಲಿಸಬೇಕು ಎಂದು ಪೊಲೀಸರು ಭಾವಿಸಿದ್ದಾರೆ. ಆದರೆ, ನ್ಯಾಯಾಲಯ ತಕ್ಷಣವೇ ಎಫ್.ಐ.ಆರ್. ದಾಖಲಿಸಬೇಕು ಎಂದು ಭಾವಿಸಿದರೆ ಅದೇ ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಏಳು ಮಹಿಳಾ ಕುಸ್ತಿ ಪಟುಗಳು ಸಿಂಗ್ ವಿರುದ್ಧ ಲೈಂಗಿಕ ಪೀಡನೆಯ ಆರೋಪ ಮಾಡಿದ್ದಾರೆ. ಈ ಬಗ್ಗೆ ದೂರು ನೀಡಲು ಹೋದರೂ ಸಹ ಎಫ್.ಐ.ಆರ್. ದಾಖಲಿಸಿಲ್ಲ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಕುಸ್ತಿ ಪಟುಗಳು ಅರ್ಜಿ ದಾಖಲಿಸಿದ್ದರು.

ಸಾಲಿಸಿಟರ್ ಹೇಳಿಕೆಯನ್ನು ಪರಿಗಣಿಸಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ಸಾಕ್ಷಿಗಳಿರದ ಹೊರತು ನಾವೂ ಸಹ ಇನ್ನೊಂದು ಪಕ್ಷದ ನಿಲುವು ಕೇಳದೇ ಕ್ರಮ ತೆಗೆದುಕೊಳ್ಳುವುದಿಲ್ಲ. ನಿಮ್ಮ ಬಳಿ ಇರುವ ದಾಖಲೆಗಳನ್ನು ಶುಕ್ರವಾರ ಸಲ್ಲಿಸಿ. ಈ ಪ್ರಕರಣದಲ್ಲಿ ಅಪ್ರಾಪ್ತರೂ ಇರುವ ಕಾರಣ ವಿಷಯ ಪರಿಗಣಿಸಿದೆವು ಎಂದು ಹೇಳಿದರು. ಏಪ್ರಿಲ್ 21ರಂದು ದೂರು ದಾಖಲಿಸಲಾಗಿತ್ತು. ಆದರೆ, ಏಪ್ರಿಲ್ 24ರವರೆಗೂ ಪೊಲೀಸರು ಎಫ್.ಐ.ಆರ್. ದಾಖಲಿಸಿಲ್ಲ ಎಂದು ಮಹಿಳಾ ಕುಸ್ತಿ ಪಟುಗಳು ಸುಪ್ರೀಂ ಕೋರ್ಟ್ ಎದುರು ದೂರಿದ್ದರು.

# ಎಐಸಿಸಿ ಕಾರ್ಯದರ್ಶಿ ಮಯೂರ್ ಜಯಕುಮಾರ್ ಬಿರುಸಿನ ಪ್ರಚಾರ



ಹೊನ್ನಾಳಿ

ಹೊನ್ನಾಳಿ, ಏ. 26- ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಜಿ. ಶಾಂತನಗೌಡ ಅವರ ಪರ ಎಐಸಿಸಿ ಕಾರ್ಯದರ್ಶಿಗಳೂ, ಕರ್ನಾಟಕ ಉಸ್ತುವಾರಿಯೂ ಆಗಿರುವ ಮಯೂರ್ ಜಯಕುಮಾರ್ ಅವರು ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಇಂದು ಬಿರುಸಿನ ಪ್ರಚಾರ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಯೂರ್ ಜಯಕುಮಾರ್ ಅವರು, ಶೇ. 40 ರಷ್ಟು ಲಂಚಕ್ಕೆ ಕೈ ಚಾಚುವ ಬಿಜೆಪಿಯನ್ನು ಕಿತ್ತೊಗೆಯಬೇಕೆಂದು ಮತದಾರರಿಗೆ ಕರೆ ನೀಡಿದರು. ಈ ಬಾರಿ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರನ್ನು ಸೋಲಿಸುವಂತೆ ಮನವಿ ಮಾಡಿದರು.

ಪಕ್ಷದ ಅಭ್ಯರ್ಥಿ ಡಿ.ಜಿ. ಶಾಂತನಗೌಡ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಬಿ. ಮಂಜಪ್ಪ, ಕಾಂಗ್ರೆಸ್ ಮುಖಂಡರಾದ ಹೊನ್ನಾಳಿ ಉಮಾಪತಿ, ಹೊನ್ನಾಳಿ ಸಿದ್ಧಪ್ಪ, ಕೆಂಗಲಹಳ್ಳಿ ಷಣ್ಮುಖಪ್ಪ ಮತ್ತಿತರರಿದ್ದರು.

# ನಗರದಲ್ಲಿ ಇಂದು ಶ್ರೀ ಸಚ್ಚಿದಾನಂದ ಸ್ವಾಮೀಜಿ ಕಿರೀಟೋತ್ಸವ ಸಮಾರಂಭ

ದಾವಣಗೆರೆ, ಏ. 26- ದೈವಜ್ಞ ಬ್ರಾಹ್ಮಣ ಸಮಾಜ ಸಂಘ ದಾವಣಗೆರೆ ಇವರ ವತಿಯಿಂದ ದೈವಜ್ಞ ಬ್ರಾಹ್ಮಣ ಮಠಾಧೀಶರಾದ ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಮಹಾಸ್ವಾಮಿಗಳವರ ಪಟ್ಟಾಭಿಷೇಕದ ರಜತ ಮಹೋತ್ಸವದ ನಿಮಿತ್ತ ಕಿರೀಟೋತ್ಸವ ಸಮಾರಂಭವನ್ನು ನಾಳೆ ದಿನಾಂಕ 27 ರ ಗುರುವಾರ ನಗರದ ಶ್ರೀ ರೇಣುಕಾ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಪ್ರಶಾಂತ್ ವಿಶ್ವನಾಥ್ ವೆರ್ಣೇಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ಗುರುವಾರ ಬೆಳಿಗ್ಗೆ 8ಕ್ಕೆ ಮಾತೆಯರಿಂದ ಕುಂಕುಮಾರ್ಚನೆ, ಬೆಳಿಗ್ಗೆ 9 ಕ್ಕೆ ಪುರುಷರಿಂದ ಪುಷ್ಪಾರ್ಚನೆ, ವೇದಘೋಷಗಳೊಂದಿಗೆ ಶ್ರೀಗಳ ಆಗಮನ, ಬೆಳಿಗ್ಗೆ 10.30 ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಇದೇ ಸಂದರ್ಭದಲ್ಲಿ ಶ್ರೀಗಳವರ ಕಿರೀಟೋತ್ಸವ, ರಾಜೋಪಚಾರ ಪೂಜೆ, ಗುರುಸ್ತೋತ್ರ ಪಠಣ, ಫಲ-ಮಂತ್ರಾಕ್ಷತೆ, ಮಹಾಪ್ರಸಾದ, ಸಂಜೆ 4 ಕ್ಕೆ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ದೈವಜ್ಞ ಸಮಾಜದ ಸಾಧಕರಿಗೆ ಸನ್ಮಾನ, ಸಂಜೆ 5.30 ರಿಂದ ರಾಜ್ಯಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ (ಧಾರ್ಮಿಕ ನೃತ್ಯ, ಕಿರು ನಾಟಕ, ಭರತನಾಟ್ಯ) ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಸತೀಶ್ ಶ್ರೀಕಾಂತ್ ಸಾನು, ಸಾಯಿಪ್ರಕಾಶ್ ಸುಪರರಾವ್ ವೆರ್ಣೇಕರ್, ಡಿ.ಎನ್. ಸುಬ್ಬರಾವ್ ಕುಂಬಳೂರು, ರಾಘವೇಂದ್ರ, ನರಸಿಂಹಪ್ಪ, ದಿವಾಕರ ಹಡಗಲಿ, ಸಚಿನ್ ಎಸ್. ವೆರ್ಣೇಕರ್, ರಾಜೀವ್ ವೆರ್ಣೇಕರ್ ಉಪಸ್ಥಿತರಿದ್ದರು.

## ಓದುಗರ ಪತ್ರ

# ಚುನಾವಣಾ ಕಾಲದಲ್ಲಿ ಸರಳತೆಯ ಪ್ರಹಸನ

ಮಾನ್ಯರೇ,

ಚುನಾವಣಾ ದಿನಗಳಲ್ಲಿ ಕೆಲ ರಾಜಕಾರಣಿಗಳು ಸರಳತೆ ಪ್ರದರ್ಶಿಸುವಲ್ಲಿ ತೊಡಗಿದ್ದಾರೆ. ಬರಿಗಾಲಲ್ಲಿ ನಡೆಯುವುದೋ, ಇಲ್ಲವೇ ದರ್ಶಿನಿ ಹೋಟೆಲ್‌ಗಳಲ್ಲಿ ತಿಂಡಿ - ಊಟ ಮಾಡುವ ಮೂಲಕ ಜನಸಾಮಾನ್ಯರಂತೆ ನಾವಿದ್ದೇವೆ ಎಂದು ತೋರಿಸಿಕೊಳ್ಳುತ್ತಿದ್ದಾರೆ. ಇನ್ನೊಬ್ಬರು ಸಾರ್ವಜನಿಕರಿಗೆ ದೋಸೆ ಮಾಡುವ ಮೂಲಕ ನಮಗೂ ಅಡುಗೆ ಮಾಡಲು ಬರುತ್ತದೆ ಎಂಬುದನ್ನು ತೋರಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ.

ಆದರೆ, ಇದೇ ರಾಜಕಾರಣಿಗಳು ಚುನಾವಣೆಯಲ್ಲಿ ಸಲ್ಲಿಸಿರುವ ನಾಮಪತ್ರ ನೋಡಿದರೆ ಕೋಟಿಗಟ್ಟಲೆ ಆಸ್ತಿ ಹೊಂದಿದ್ದಾರೆ. ವರ್ಷದಿಂದ ವರ್ಷಕ್ಕೆ ಚುನಾವಣಾ ನಾಮಪತ್ರಗಳಲ್ಲಿ ಅಭ್ಯರ್ಥಿಗಳು ಘೋಷಿಸುವ ಆಸ್ತಿಯ ಪ್ರಮಾಣ ನಿರಂತರ ಏರಿಕೆಯಾಗುತ್ತಿದೆ.

ಬಹುತೇಕ ರಾಜಕಾರಣಿಗಳು ಬಳಸುವ ವಸ್ತುಗಳು ದುಬಾರಿ. ಜೀವನ ಶೈಲಿಯೂ ಐಷಾರಾಮಿ. ಹೀಗಿರುವಾಗ ಚುನಾವಣಾ ವೇಳೆ ಸರಳತೆ ಪ್ರದರ್ಶಿಸುವುದರಲ್ಲಿ ಏನಾದರೂ ಅರ್ಥವಿದೆಯೇ? ಜನ ಇದನ್ನು ಅರ್ಥ ಮಾಡಿಕೊಳ್ಳದಷ್ಟು ದಡ್ಡರು ಎಂದು ಭಾವಿಸಿದ್ದಾರೆಯೇ?

ಕೋಟಿಗಟ್ಟಲೆ ಆಸ್ತಿ ಇರುವಾಗ ಅದಕ್ಕೆ ತಕ್ಕ ಹಾಗೆ ಬದುಕಿದರೆ ತಪ್ಪೇನೂ ಇಲ್ಲ. ಹಾಗೆ ಬದುಕಿಯೇ ಜನ ಸೇವೆ ಮಾಡಬಹುದು, ಜನಪರ ಆಗಿರಬಹುದು ಎಂದು ತೋರಿಸಿಕೊಟ್ಟವರೂ ಇದ್ದಾರೆ.

ಹುಸಿ ಸರಳತೆಯನ್ನು ಚುನಾವಣಾ ವೇಳೆಯಷ್ಟೇ ತೋರಿದರೆ ಪ್ರಯೋಜನವಿಲ್ಲ. ಸರಳತೆ ಎಂಬುದು ನಿರಂತರವಾಗಿರಲಿ. ಮಹಾತ್ಮ ಗಾಂಧಿ ಅಂಥವರು ಚುನಾವಣೆಗಾಗಿ ಸರಳರಾಗಲಿಲ್ಲ. ಜೀವನವಿಡೀ ಸರಳವಾಗಿದ್ದರು. ಅಂತಹ ಗುಣ ಅಂತರಂಗದಲ್ಲಿ ಇದ್ದಲ್ಲಿ ಮಾತ್ರ ಬಹಿರಂಗ ಸರಳತೆ ತೋರಿಸಿ. ಇಲ್ಲವಾದರೆ ಸರಳತೆಯ ವರ್ತನೆಗಳೂ ಚುನಾವಣಾ ಭರವಸೆಯಂತೆ ಹುಸಿ ಎಂದು ಪ್ರಜ್ಞಾವಂತ ಮತದಾರ ಭಾವಿಸುತ್ತಾನೆ ಅಷ್ಟೇ.

**- ಮುರಳಿ ಮೋಹನ್**

# ಅಜಯ್ ಕುಮಾರ್ ಅವರಿಗೆ ದಕ್ಷಿಣ ಕ್ಷೇತ್ರದಲ್ಲಿ ಜನ ಆಶೀರ್ವಾದದ ಬಲ



ದಾವಣಗೆರೆ, ಏ.26- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ್ ಕುಮಾರ್ ಅವರ ಮತ ಪ್ರಚಾರ ಬಿರುಸಿನಿಂದ ಸಾಗಿದ್ದು, ಜನ ಆಶೀರ್ವಾದದ ಬಲ ಹೆಚ್ಚಾಗಿ ಸಿಗುತ್ತಿದೆ.

ಮತ ಪ್ರಚಾರ ನಡೆಸುವಾಗ ಆ ಕ್ಷೇತ್ರದ ಹಿರಿಯ ಮತದಾರರು ಅಜಯ್ ಕುಮಾರ್ ಅವರಿಗೆ ದೃಷ್ಟಿ ತೆಗೆಯುವುದು, ಆಶೀರ್ವದಿಸುವುದು, ಅವರ ಆಗಮನಕ್ಕೆ ಆತ್ಮೀಯ ಸ್ವಾಗತ ನೀಡುತ್ತಿರುವುದು ಜನ ಆಶೀರ್ವಾದಕ್ಕೆ ಬಲವನ್ನು ತಂದುಕೊಟ್ಟಿದೆ.

ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್ ಅವರೊಂದಿಗೆ ಮಹಾದೇವಪುರ ಗ್ರಾಮದಲ್ಲಿ ಕಾರ್ಯಕರ್ತರ ಸಭೆ ನಡೆಸಲಾಯಿತು.

ಸಂಜೆ 14ನೇ ವಾರ್ಡ್ ಚಾಮರಾಜಪೇಟೆಯ ಮಟ್ಟಿಕಲ್ ಶ್ರೀ ಬಸವೇಶ್ವರ ದೇವಸ್ಥಾನದಿಂದ ಪ್ರಚಾರ ಮೂಲಕ ಮತಯಾಚನೆ ನಡೆಸಿದರು. ಈ ವೇಳೆ ಬಿಜೆಪಿ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಶಿಂಧೆ, ದಕ್ಷಿಣ ಮಂಡಲ ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ ಮತ್ತಿತರರು ಅಜಯ್ ಕುಮಾರ್ ಪರ ಮತ ಯಾಚಿಸಿದರು.

## ನಗರದಲ್ಲಿ ನಾಳೆ ಜಿಪ್‌ಲೈನ್ ಕ್ರೀಡೆ

ದಾವಣಗೆರೆ, ಏ.26 - ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಾಡಿದ್ದು ದಿನಾಂಕ 28 ರ ಶುಕ್ರವಾರ ಸಂಜೆ 5 ಗಂಟೆಗೆ ಮಹಾನಗರ ಪಾಲಿಕೆ ಕಟ್ಟಡದಲ್ಲಿ ಮತದಾನ ಜಾಗೃತಿ ಮೂಡಿಸುವ ಸಲುವಾಗಿ ಜಿಪ್‌ಲೈನ್ ಕ್ರೀಡೆ ಆಯೋಜಿಸಲಾಗಿದೆ.

ಭಾಗವಹಿಸಲಿಚ್ಚಿಸುವ ಮತದಾರರು ನಿಗದಿತ ದಿನಾಂಕದಂದು ತಮ್ಮ ಚುನಾವಣಾ ಗುರುತಿನ ಚೀಟಿ ಪ್ರತಿಯೊಂದಿಗೆ ಹಾಜರಾಗಿ ಜಿಪ್‌ಲೈನ್ ಕ್ರೀಡೆಯಲ್ಲಿ ಭಾಗವಹಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಸುಚೇತನಾ ನೆಲವಿಗಿ ತಿಳಿಸಿದ್ದಾರೆ.

## ನಗರದ ಜೈನ್ ಆಸ್ಪತ್ರೆಯಲ್ಲಿ ಆರೋಗ್ಯ ಶಿಬಿರ

ಶ್ರೀ ಭಗವಾನ್ ಮಹಾವೀರ ಜೈನ್ ಆಸ್ಪತ್ರೆಯಲ್ಲಿ ಇಂದಿನಿಂದ ಇದೇ ದಿನಾಂಕ 30ರವರೆಗೆ ಪ್ರತಿದಿನ ಬೆಳಿಗ್ಗೆ 9 ರಿಂದ 12ವರೆಗೆ ಆರೋಗ್ಯ ಶಿಬಿರ ನಡೆಯಲಿದೆ. ಶಿಬಿರದಲ್ಲಿ ವಿವಿಧ ಕಾಯಿಲೆಗಳ ಕುರಿತಂತೆ ಸೂಕ್ತ ಮಾಹಿತಿ ಮತ್ತು ಚಿಕಿತ್ಸೆ ನೀಡಲಾಗುತ್ತದೆ. ವಿವರಕ್ಕೆ ಸಂಪರ್ಕಿಸಿ : 9606048423.

# ಎಂಟೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಭಾರೀ ಬಹುಮತದಿಂದ ಗೆಲುವು : ಸಂಸದ ಸಿದ್ದೇಶ್ವರ ವಿಶ್ವಾಸ

ದಾವಣಗೆರೆ, ಏ.26- ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರ ಸೇರಿದಂತೆ, ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಹರಪನಹಳ್ಳಿ ವಿಧಾನಸಭಾ ಕ್ಷೇತ್ರ ಸೇರಿದಂತೆ, ಎಲ್ಲಾ ಎಂಟೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಭಾರೀ ಬಹುಮತದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ವಿಶ್ವಾಸ ವ್ಯಕ್ತಪಡಿಸಿದರು.



ನಗರದ ಎಪಿಎಂಸಿ ಮೇಲ್ಸೇತುವೆ ಎದುರಿನ ರೇಣುಕಾ ಟ್ರೇಡರ್ಸ್‌ನಲ್ಲಿ ಇಂದು ಆಯೋಜಿಸಲಾಗಿದ್ದ ಮಾಧ್ಯಮ ಕೇಂದ್ರ ಹಾಗೂ ಟೆಲಿಕಾಲ್ ಸೆಂಟರ್ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಬಹುತೇಕ ಕಡೆಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ. ಆ ಮೂಲಕ ರಾಜ್ಯವನ್ನು ಬಲಿಷ್ಠ ಮಾಡುವ ಮೂಲಕ ದೇಶವನ್ನು ಬಲಿಷ್ಠ ದೇಶವನ್ನಾಗಿ ಮಾಡಬೇಕಾಗಿದೆ. ಅದಕ್ಕಾಗಿ ರಾಜ್ಯದ ಜನತೆ ಬಿಜೆಪಿ ಪಕ್ಷವನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಕೆಲವು ಸಮೀಕ್ಷೆಗಳ ಪ್ರಕಾರ ರಾಜ್ಯದಲ್ಲಿ ಬಿಜೆಪಿ 120ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ ಎಂದು ವರದಿ ಹೇಳಿದೆ. ರಾಜ್ಯ ಮತ್ತು ರಾಷ್ಟ್ರದ ನಾಯಕರು ರಾಜ್ಯದಲ್ಲಿ ಚುನಾವಣಾ ಕ್ಷೇತ್ರಗಳಲ್ಲಿ ಪ್ರಚಾರ ನಡೆಸುತ್ತಿದ್ದು, 140ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಲಿದೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಮಾತನಾಡಿ, ರಾಜ್ಯ ಸರ್ಕಾರ ಕಳೆದ ಮೂರೂವರೆ ವರ್ಷಗಳಲ್ಲಿ ರಾಜ್ಯದಲ್ಲಿ 30/40 ವರ್ಷಗಳಲ್ಲಿ ಆಗದಷ್ಟು ಅಭಿವೃದ್ಧಿ ಕೆಲಸಗಳು ಆಗಿವೆ ಎಂದರು.

ಈ ವೇಳೆ ಜಿಲ್ಲಾ ವಕ್ತಾರ ಡಿ.ಎಸ್. ಶಿವಶಂಕರ್, ಉತ್ತರ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ನಾಗರಾಜ್ ಲೋಕಿಕೆರೆ, ದೂಡಾ ಅಧ್ಯಕ್ಷ ಎ.ವೈ. ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ಇತರರು ಇದ್ದರು.

# ಉತ್ತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಇಂದು ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಇಂದು ಪ್ರಚಾರ ನಡೆಸುವರು.

ಬೆಳಿಗ್ಗೆ 8ಕ್ಕೆ ಕೆಟಿಜೆನಗರ 18ನೇ ಕ್ರಾಸ್ ನಲ್ಲಿರುವ ಶ್ರೀ ಬಲಮುರಿ ಗಣಪತಿ ದೇವಸ್ಥಾನ ದಿಂದ ಪ್ರಚಾರ ಪ್ರಾರಂಭವಾಗಲಿದ್ದು, 10.30ರವರೆಗೆ ವಾರ್ಡ್ 28ರ ಶೆಟ್ಟರ್ ಜೀನ್ ಕಾಂಪೌಂಡ್, ಕೆಬಿ ಬಡಾವಣೆ, ಲೇಬರ್ ಕಾಲೋನಿ, ಭಗತ್ ಸಿಂಗ್ ನಗರ, ಬಸವರಾಜ ಲೇಔಟ್, ಸೇ-ಸಮ್ ಲೇಔಟ್, ಬೆಳಿಗ್ಗೆ 10.30ರಿಂದ ಮಧ್ಯಾಹ್ನ 2 ಗಂಟೆವರೆಗೆ ವಾರ್ಡ್ ನಂಬರ್ 37ರ ಕೆಟಿಜಿನಗರ, ಸಿದ್ದರಾಮಯ್ಯ ಬಡಾವಣೆ, ಸಂಜೆ 4.30ಕ್ಕೆ ಆಂಜನೇಯ ಬಡಾವಣೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ 6 ರವರೆಗೆ ವಾರ್ಡ್ ನಂಬರ್ 40ರ ಬಿ ಐ ಟಿ ಲೇಔಟ್ ರಸ್ತೆ, ಕಲಾ ಕಾಲೇಜ್ ಕಾಂಪೌಂಡ್, ವಿದ್ಯಾನಗರ, ಗಾಂಧಿ ಸರ್ಕಲ್, ವಿನಾಯಕ್ ನಗರದಲ್ಲಿ ಮತಯಾಚಿಸುವರು.

ಸಂಜೆ 6.30ರಿಂದ 8 ರವರೆಗೆ ವಾರ್ಡ್ ನಂಬರ್ 42ರ ಲಕ್ಷ್ಮಿ ಫ್ಲೋರ್ ಮಿಲ್, ಸುಕ್ಷೇಮ ಆಸ್ಪತ್ರೆ, ಎನ್‌ಹೆಚ್4 ಬೈಪಾಸ್, ಬಾಪೂಜಿ ಪಾಲಿಟೆಕ್ನಿಕ್ ಭಾಗಗಳಲ್ಲಿ ಮತ ಪ್ರಚಾರ ನಡೆಸುವರು.

# 1ನೇ ವಾರ್ಡಿನಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಅಜಯ್ ಕುಮಾರ್ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ್ ಕುಮಾರ್ ಅವರು ಇಂದು ಬೆಳಗ್ಗೆ 7.30ಕ್ಕೆ 45ನೇ ವಾರ್ಡ್ ಯರಗುಂಟೆ ಗ್ರಾಮದಲ್ಲಿ ಮತ ಯಾಚನೆ ನಡೆಸುವರು. ಬೆಳಿಗ್ಗೆ 9 ಕ್ಕೆ ಯರಗುಂಟೆ ಗ್ರಾಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬಿಜೆಪಿ ಕರ್ನಾಟಕ ಕಾರ್ಯಕರ್ತರೊಂದಿಗೆ ಸಂವಾದ ಕಾರ್ಯಕ್ರಮ, ಸಂಜೆ 4.30ಕ್ಕೆ 1ನೇ ವಾರ್ಡ್ ಗಾಂಧಿನಗರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಮತ ಯಾಚನೆ ನಡೆಸುವರು. ಬಿ

ಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಶಿಂಧೆ ಭಾಗವಹಿಸಲಿದ್ದಾರೆ ಎಂದು ದಕ್ಷಿಣ ಮಂಡಲ ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ್ ತಿಳಿಸಿದ್ದಾರೆ.

# ಬಿಜೆಪಿ ಅಭ್ಯರ್ಥಿ ಬಸವರಾಜ ನಾಯ್ಕ ಸಹೋದರ ಸೇರಿ ಹಲವರು ಎಸ್ಸೆಸ್ಸೆಂ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆ

ದಾವಣಗೆರೆ, ಏ.26- ಮಾಜಿ ಸಚಿವರೂ, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯೂ ಆಗಿರುವ ಎಸ್.ಎಸ್. ಮಲ್ಲಿಕಾರ್ಜುನ್, ಮಾಯಕೊಂಡದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್. ಬಸವಂತಪ್ಪ ಸಮ್ಮುಖದಲ್ಲಿ ಮಾಯಕೊಂಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ. ಬಸವರಾಜನಾಯ್ಕ ಸಹೋದರ ಸೇರಿದಂತೆ, ಐನೂರಕ್ಕೂ ಹೆಚ್ಚು ದಾವಣಗೆರೆ ಉತ್ತರ ಮತ್ತು ಮಾಯಕೊಂಡದ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.



ಬಸವರಾಜನಾಯ್ಕ ಅವರ ಸಹೋದರ - ಬಿಜೆಪಿ ಮುಖಂಡ ಗಂಗಾಧರನಾಯ್ಕ ಮತ್ತು ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷೆ ಗೀತಾಬಾಯಿ ಹಾಗೂ ಕೆನರಾ ಬ್ಯಾಂಕ್ ನಿವೃತ್ತ ಮ್ಯಾನೇಜರ್ ಎಂ.ಗುಡ್ಡಾನಾಯ್ಕ ಅವರುಗಳ ನೇತೃತ್ವದಲ್ಲಿ ಬಿಜೆಪಿಗೆ ಸಾಮೂಹಿಕ ರಾಜೀನಾಮೆ ನೀಡಿ ಕಾಂಗ್ರೆಸ್ ಪಕ್ಷ ಸೇರಿದರು.

**ಕಾಂಗ್ರೆಸ್ ಸೇರಿದ ಪ್ರಮುಖರು:** ಆಲೂರು ಹಟ್ಟಿಯ ಜಿ.ಕಾಳಾನಾಯ್ಕ ಮತ್ತು ಸಹೋದರರು, ಕೆ. ರಮೇಶನಾಯ್ಕ, ಪಿ.ಸಂತೋಷನಾಯ್ಕ, ಶೇಖರನಾಯ್ಕ, ಚಂದ್ರನಾಯ್ಕ, ರಮೇಶನಾಯ್ಕ, ಮಂಜಾನಾಯ್ಕ, ವಿಜಯಕುಮಾರ್, ಅರಸಾಪುರ ಸೇವಾನಾಯ್ಕ, ಹೊನ್ನೂರು ಗೊಲ್ಲರಹಟ್ಟಿಯ ಗೀತಾಬಾಯಿ, ಯುವರಾಜ, ದೇವರಾಜ್, ವಿಜಯನಾಯ್ಕ, ರತ್ನಾಬಾಯಿ, ಚಂದ್ರು, ಆಕಾಶ್, ಅಭಿಷೇಕ್, ತರೇಷ್ ನಾಯ್ಕ, ಹರೀಶ್ ನಾಯ್ಕ, ಕಿರಣ ನಾಯ್ಕ, ಮಹೇಶ ನಾಯ್ಕ, ರಮೇಶ ನಾಯ್ಕ, ಸುನೀಲ ನಾಯ್ಕ, ರವಿ ನಾಯ್ಕ, ಸುದೀಪ್ ನಾಯ್ಕ, ಅಭಿನಾಯ್ಕ, ನಾಗರಾಜ ನಾಯ್ಕ, ಚಂದ್ರನಾಯ್ಕ, ಪ್ರಕಾಶನಾಯ್ಕ, ಲಕ್ಷ್ಮೀಬಾಯಿ, ರುಚಿತ್, ಚಂದನ್, ಆಲೂರು ಹಟ್ಟಿಯ ಮಹಾಂತೇಶ ನಾಯ್ಕ, ಚಂದ್ರನಾಯ್ಕ, ಉಮೇಶನಾಯ್ಕ, ರವಿನಾಯ್ಕ, ರಾಜನಾಯ್ಕ, ನಾಗಪ್ಪನಾಯ್ಕ, ಮಹಾದೇವ, ಮಧುಸೂದನ್, ನಾಗರಾಜ ನಾಯ್ಕ, ಮೋಹನ್ ಕುಮಾರ್, ಅರುಣ ನಾಯ್ಕ, ಬೋರಗೊಂಡನಹಳ್ಳಿಯ ಅಂಜಿನಪ್ಪ, ಗಂಗಾಧರ, ಯಲ್ಲಪ್ಪ, ಮಂಜಪ್ಪ, ಗಂಗಾಧರ, ಹಾಲಪ್ಪ, ನವೀನ್, ರವಿಕುಮಾರ್, ನಾಗಪ್ಪ, ಸುದೀಪ, ಮಂಜಪ್ಪ, ಮಂಜುನಾಥ್, ರವಿ, ದರ್ಶನ್, ಕುಮಾರ, ಹಾಲಪ್ಪ, ಭರಮಪ್ಪ, ಜಯಪ್ಪ.

ಈ ಸಂದರ್ಭದಲ್ಲಿ ಶಾಮನೂರು ವೇದಮೂರ್ತಿ, ಶಾಮನೂರು ಪರಮೇಶ್ವರಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷರುಗಳಾದ ಮುದೇಗೌಡ್ರು ಗಿರೀಶ್, ಎಸ್.ಕೆ.ಚಂದ್ರಶೇಖರ್ ಅಣಜಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರುಗಳಾದ ಮಾಯಕೊಂಡದ ಎಸ್.ವೆಂಕಟೇಶ್, ಬಿ. ಕರಿಬಸಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ತಿಪ್ಪಾನಾಯ್ಕ, ಗುಮ್ಮನೂರು ಶಂಭುಲಿಂಗಪ್ಪ, ಮೆಳ್ಳೇಕಟ್ಟೆ ಹನುಮಂತಪ್ಪ, ಹುಲಿಕಟ್ಟೆ ಶಿವಣ್ಣ, ಆಲೂರು ಸೋಮಣ್ಣ, ಮಹೇಶಣ್ಣ, ಸಿದ್ದೇಶ್, ಪಂಪಾನಾಯ್ಕ, ಕೆ.ರಮೇಶ ನಾಯ್ಕ, ಶ್ರೀಮತಿ ಸವಿತಾ ಮಂಜಾನಾಯ್ಕ, ಶೀಲಾಬಾಯಿ ರಮೇಶನಾಯ್ಕ, ಮಂಜುಳಾ ಕಾಳಾನಾಯ್ಕ, ಶೀಲಾಬಾಯಿ ಚಂದ್ರನಾಯ್ಕ, ಗೊಲ್ಲರಹಳ್ಳಿ ತಿಪ್ಪಣ್ಣ, ಕೆಪಿಸಿಸಿಯ ನಾಗರಾಜನಾಯ್ಕ, ಅಣಜಿ ರಾಜು, ಬಸವಲಿಂಗಪ್ಪ, ಕಾಟೀಹಳ್ಳಿ ರಂಗಸ್ವಾಮಿ, ದಾಗಿನಕಟ್ಟೆ ರಂಗಸ್ವಾಮಿ ಮತ್ತಿತರರಿದ್ದರು.

# ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಯಾಗಿ ಪ್ರಸಾದ್ ಹೆಚ್.ಎಸ್.



ದಾವಣಗೆರೆ, ಏ.26- ದಾವಣಗೆರೆ ಉತ್ತರ ವಲಯ ನಗರ ಕಾಂಗ್ರೆಸ್ ಸಮಿತಿಯ ಸಂಘಟನಾ ಕಾರ್ಯದರ್ಶಿಯನ್ನಾಗಿ ಪ್ರಸಾದ್ ಹೆಚ್.ಎಸ್. ಹುಲ್ಲುಮನಿ ಅವರನ್ನು ನೇಮಕ ಮಾಡಲಾಗಿದೆ ಎಂದು ಅಧ್ಯಕ್ಷ ಕೆ.ಜಿ. ಶಿವಕುಮಾರ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಬೇಸಿಗೆಯ ಹಿನ್ನೆಲೆಯಲ್ಲಿ ಸಾಮಾಜಿಕ ಸೇವಾ ಸಂಸ್ಥೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ದಾನಿಗಳ ನೆರವಿನೊಂದಿಗೆ 1 ತಿಂಗಳ ಪರ್ಯಂತ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವನ್ನು ಶ್ರೀ ಜಯದೇವ ಮುರುಘ ರಾಜೇಂದ್ರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ. ಬೇತೂರು ಮರಡಿ ರೇವಣಸಿದ್ದಪ್ಪ, ಕಂಸಾಗರ ಪಂಚಣ್ಣ, ರಮೇಶ್ ಏಕಬೋಟೆ ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ.


80x120 ಅಡಿ ಅಳತೆಯ
3 ಅಂತಸ್ತಿನ ಕಟ್ಟಡ ಬಾಡಿಗೆಗೆ ಇದೆ



ದಾವಣಗೆರೆ ನಗರ ನಿಜಲಿಂಗಪ್ಪ ಬಡಾವಣೆಯ ರಿಂಗ್ ರೋಡ್ ಸರ್ಕಲ್ ಹತ್ತಿರ, ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ಡೋರ್ ನಂ. 429, 430ರಲ್ಲಿ 80x120 ಅಡಿ ಅಳತೆಯ 135 ಚದುರಡಿಯ 1ನೇ ಮಹಡಿ, 2ನೇ ಮಹಡಿ, 3ನೇ ಮಹಡಿಯಿರುವ ಬಿಲ್ಡಿಂಗ್ ಖಾಲಿಯಿದ್ದು, ಬಾಡಿಗೆಗೆ ಇದೆ. ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್, ಲಿಫ್ಟ್ ಸೌಲಭ್ಯ ಹೊಂದಿದೆ. ಸಂಪೂರ್ಣ ಕಟ್ಟಡವು ಬ್ಯಾಂಕ್, ಶಾಲೆ, ಕಾಲೇಜು, ಸರ್ಕಾರಿ ಕಛೇರಿ, ಖಾಸಗಿ ಕಛೇರಿ, ವಾಣಿಜ್ಯ ಉದ್ಯಮಗಳಿಗೆ ಬಾಡಿಗೆಗೆ ದೊರೆಯುತ್ತದೆ.
ಸಂಪರ್ಕಿಸಿ. 82961 18778


M.E.S. CONVENT
Admission open for Pre Nursery
LKG, UKG primary and high school residential and Dayscholars. Technology based education. Admissions provided.
Co-circular activities, karate classes, swimming training, Vedic maths, handwriting classes, dance and many more activities events conducted. Individual care and highly trained teachers provided.
For details contact Anjeneya Badavane 9th cross, Davanagere.
98800 30171, 98804 36414

CONFIDENT DENTAL LABORATORY PVT LTD.,
TECHNOLOGY FOR TODAY AND TOMORROW
(A unit of Confident Dental Equipment)
WANTED SALES EXECUTIVE AT DAVANGERE
Graduate with Good Communication Skill with two-wheeler
Remuneration : Rs. 3.00 lakh TA/DA, incentive
Apply Immediately :
E-Mail : infor @ confidentmp.com
Mobile : +91 91762 00934


ANMOL SCIENCE PU COLLEGE
Hearty Congratulations to all our Anmol Students
for Exceptional PUC - II Board Results
STATE 7th rank
DISTRICT (RURAL) 1st rank
DISTRICT (URBAN) 2nd rank
590 600
SIRI YASHA DINESH
33 Distinction
100% Result
ADMISSIONS NOW OPEN FOR 2023-24
PCMB - PCMC | JEE | NEET | CET BATCHES
FOR ADMISSIONS CONTACT : 9738286180, 9686061270, 9620768957

## ವಿಧಾನಸಭಾ ಚುನಾವಣೆ : ಸಾಹಸ ಕ್ರೀಡೆಯೊಂದಿಗೆ ಮತದಾನ ಜಾಗೃತಿ





ದಾವಣಗೆರೆ, ಏ. 26 - ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಮಂಗಳವಾರ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭೂ ಸಾಹಸ ಕ್ರೀಡೆಯಾದ ವಾಲ್ ಕ್ಲೈಂಬಿಂಗ್ ಆಯೋಜಿಸುವುದರ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯಿಂದ ಸ್ಪೋಟ್ಸ್ ಕ್ಲೈಂಬಿಂಗ್ ಉಚಿತ ಶಿಬಿರ ಏರ್ಪಡಿಸಿದ್ದರು. ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡಾಪಟುಗಳು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಸುಚೇತಾ ನೆಲವಿಗಿ, ರಾಷ್ಟ್ರೀಯ ಸಹಾಸ ಅಕಾಡೆಮಿಯ ತರಬೇತುದಾರ ಅಶ್ಮತ್ ಉಲ್ಲಾ ಪಿ.ಎಲ್. ಉಪಸ್ಥಿತರಿದ್ದರು.

## ಚುನಾವಣೆ : ಪೊಲೀಸ್ ವೀಕ್ಷಕರಾಗಿ ತ್ರಿಪಾಠಿ

ದಾವಣಗೆರೆ, ಏ.26- ಸಾರ್ವತ್ರಿಕ ವಿಧಾನಸಭಾ ಚುನಾವಣೆಯನ್ನು ಮುಕ್ತ, ಪಾರದರ್ಶಕ ಹಾಗೂ ಶಾಂತಿಯುತವಾಗಿ ನಡೆಸಲು ಚುನಾವಣಾ ಆಯೋಗವು ದಾವಣಗೆರೆ ಜಿಲ್ಲೆಗೆ ಹಿರಿಯ ಪೊಲೀಸ್ ಅಧಿಕಾರಿ ಸರ್ವಶ್ರೇಷ್ಠ ತ್ರಿಪಾಠಿ ಅವರನ್ನು ಪೊಲೀಸ್ ವೀಕ್ಷಕರನ್ನಾಗಿ ನೇಮಕ ಮಾಡಿದೆ ಎಂದು ಜಿಲ್ಲಾಧಿಕಾರಿಯೂ ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ 7 ಕ್ಷೇತ್ರಗಳಿಗೆ ಪೊಲೀಸ್ ವೀಕ್ಷಕರಾಗಿ ಹಿರಿಯ ಐಪಿಎಸ್ ಅಧಿಕಾರಿ ಸರ್ವಶ್ರೇಷ್ಠ ತ್ರಿಪಾಠಿ ಆಗಮಿಸಿದ್ದು, ಅವರ ಇ-ಮೇಲ್ s.tripathi1976@ips.gov.in, ಮೊಬೈಲ್ : 91130 26740 ಆಗಿರುತ್ತದೆ. ಅವರು ದಾವಣಗೆರೆ ಸರ್ಕ್ಯೂಟ್‌ಹೌಸ್‌ನಲ್ಲಿ ಪ್ರತಿದಿನ ಬೆಳಿಗ್ಗೆ 8 ರಿಂದ 9 ರವರೆಗೆ ಲಭ್ಯರಿ ರುವರು. ಸಾರ್ವಜನಿಕರು ಚುನಾವಣೆಗೆ ಸಂಬಂಧಿಸಿದ ಮಾಹಿತಿ, ದೂರುಗಳಿದ್ದಲ್ಲಿ ಅವರಿಗೆ ನೀಡಬಹುದಾಗಿದೆ.

## ಅಣಜಿ ಹ್ಯಾಳೇದ ವೀರಪ್ಪ ಕಾಲೇಜಿಗೆ 3 ಡಿಸ್ಟಿಂಕ್ಷನ್

ಅಣಜಿ, ಏ.26- ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶ್ರೀ ಹ್ಯಾಳೇದ ವೀರಪ್ಪ ಶಿವಲಿಂಗಪ್ಪ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಅಮೃತ ಎ.ಆರ್. (94.33), ಭಾವನ ಎಸ್.ಯು. (88.83) ಮತ್ತು ಗುಣಶ್ರೀ ಜಿ.ಎಸ್.(85.33) ಮೂವರು ಡಿಸ್ಟಿಂಕ್ಷನ್, 10 ಪ್ರಥಮ, 10 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

## ಕಡ್ಲೇಬಾಳು ಸುತ್ತಮುತ್ತ ಉತ್ತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್ಸೆಸ್ಸೆಂ ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು ದಾವಣಗೆರೆ ಗ್ರಾಮಾಂತರ ಪ್ರದೇಶಗಳಲ್ಲಿ ಇಂದು ಪ್ರಚಾರ ನಡೆಸುವರು.

ಬೆಳಿಗ್ಗೆ 10 ಗಂಟೆಗೆ ಹಳೇ ಕಡ್ಲೇಬಾಳು, 11 ಗಂಟೆಗೆ ಕಡ್ಲೇಬಾಳು (ತರಳವಾರ ಹಟ್ಟಿ) 11.30ಕ್ಕೆ ಚಿಕ್ಕ ಓಬಜ್ಜಿಹಳ್ಳಿ, 12 ಗಂಟೆಗೆ ಅರಸಾಪುರ, 1 ಗಂಟೆಗೆ ದೊಡ್ಡ ಓಬಜ್ಜಿಹಳ್ಳಿ ಮತ್ತು 1-30 ಗಂಟೆಗೆ ಬದಿಯನಾಯ್ಕನ ತಾಂಡಗಳಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸುವರು. ಮಧ್ಯಾಹ್ನ 3 ಗಂಟೆಗೆ ಮಾಗಾನಹಳ್ಳಿ ಕೋಡಿ ಕ್ಯಾಂಪ್, 4 ಗಂಟೆಗೆ ಮಾಗಾನಹಳ್ಳಿ ನಂತರ ಸಂಜೆ 5 ಗಂಟೆಗೆ ಬಿ.ಕಲಪನಹಳ್ಳಿಯಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸುವರು.

## ರಾಣೇಬೆನ್ನೂರಿನಲ್ಲಿ ಇಂದು ನಟ ಸುದೀಪ್



ಬಿಜೆಪಿ ಅಭ್ಯರ್ಥಿ ಅರುಣಕುಮಾರ ಪೂಜಾರ ಅವರ ಪರ ಮತ ಯಾಚಿಸಲು ಚಲನಚಿತ್ರ ನಟ ಸುದೀಪ್ ಆಗಮಿಸಲಿದ್ದಾರೆ. ಬೆಳಿಗ್ಗೆ 11 ಕ್ಕೆ ಗಂಗಾಜಲ ಚೌಡೇಶ್ವರಿ ದೇವಸ್ಥಾನದಿಂದ ಮೆಡ್ಲೇರಿ ಸರ್ಕಲ್, ಎಂ.ಜಿ. ರಸ್ತೆ ನಂತರ ದರ್ಗಾ ಸರ್ಕಲ್ ನಲ್ಲಿ ರೋಡ್ ಶೋ ನಡೆಸಲಿದ್ದಾರೆ.


## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ಶಿವಕುಮಾರ ಸ್ವಾಮಿ ಬಡಾವಣೆ, 1ನೇ ಹಂತ, 1ನೇ ಕ್ರಾಸ್ ವಾಸಿಗಳಾದ
**ಶ್ರೀಮತಿ ನಿರ್ಮಲಮ್ಮ ದಿ. ಶ್ರೀ ಎ.ಕೆ. ನಾಗಪ್ಪ**
ಮಾಡುವ ವಿಜ್ಞಾಪನೆಗಳು.
ದಿನಾಂಕ:24.04.2023ನೇ ಸೋಮವಾರ ಬೆಳಗಿನ ಜಾವ 12.40ಕ್ಕೆ ನಮ್ಮ ಮಗನಾದ
**ಶ್ರೀ ಎನ್. ರೇವಣಸಿದ್ದಪ್ಪ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"**ಕೈಲಾಸ ಸಮಾರಾಧನೆ**ಯನ್ನು"
ದಿನಾಂಕ: 28.4.2023ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಶಿವಕುಮಾರಸ್ವಾಮಿ ಬಡಾವಣೆ, 1ನೇ ಹಂತ, 1ನೇ ಕ್ರಾಸ್ ದಾವಣಗೆರೆಯಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖ ತಪ್ತರು : ಪತ್ನಿ : ಶ್ರೀಮತಿ ಜೆ.ಎಸ್. ಅಕ್ಕಮಹಾದೇವಿ
ಮಕ್ಕಳಾದ : ಆಕಾಶ್ ಆರ್, ಅಜಯ್ ಆರ್, ಹಾಗೂ
ಬಂಧು ಮಿತ್ರರು. ಮೊ : 99800 32271

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



ಬಾಪೂಜಿ ವಿದ್ಯಾಸಂಸ್ಥೆ (ರಿ.)
**ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜು**
DISCIPLINE & VISION
ಮಾ.ಸ.ಬ. ಕಾಲೇಜು ಕಟ್ಟಡ, ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-02
ಫೋನ್ : 08192-250571 email :spss.pusc.dvg@gmail.com

**ಹೃತ್ಪೂರ್ವಕ ಅಭಿನಂದನೆಗಳು**
**ದ್ವಿತೀಯ ಪಿಯುಸಿ ಫಲಿತಾಂಶ-2023**

ದಿಶಾ ಆರ್.ಎಸ್. 92.66%
ಭಾವನಾ ಜಿ.ಟಿ. 90.5%
ಕಾವ್ಯ ಓ. 90.16 %
ಸಬ್ರೀನ್ ಸಿ. 89%
ದಿವ್ಯ ಸಿ.ಬಿ. 86%
ವತ್ಸಲಾ ಎಂ.ಡಿ. 86%
ಐಸಿರಿ ಪಿ. 85.83%
ಅಂಕಿತ ಆರ್.ಎನ್. 85.5%
ಸಂಜನ ಕೆ.ಎಂ. 85.33%
ಮನೋಜ್ ಟಿ.ಪಿ. 84.66%
ಗಣೇಶ್ ಬಿ. 84.5%
ರಶ್ಮಿ ಎಸ್.ಎಂ. 83.83%
ಚಂದನ ಕೆ.ಎನ್. 83.66%
ಸಿಂಧು ಎಸ್.ಆರ್. 83.5%

ಡಿಸ್ಟಿಂಕ್ಷನ್-09 ABOVE 80 – 23 ಪ್ರಥಮ ದರ್ಜೆ-68

2022-23ನೇ ಸಾಲಿನ ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಗಳಿಸಿ ಕಾಲೇಜಿಗೆ ಕೀರ್ತಿ ತಂದುಕೊಟ್ಟಂತಹ ವಿದ್ಯಾರ್ಥಿಗಳಿಗೆ, ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳು, ಆಡಳಿತ ಮಂಡಳಿಯ ಸದಸ್ಯರು, ಕಾಲೇಜಿನ ಅಧ್ಯಕ್ಷರು, ಪ್ರಾಚಾರ್ಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ.

2023-24ನೇ ಸಾಲಿನ ಪ್ರಥಮ ಪಿ.ಯು.ಸಿ. ವಿಜ್ಞಾನ ವಿಭಾಗದ ಪ್ರವೇಶಾತಿಯ ವಿಚಾರಣೆಗಾಗಿ ಸಂಪರ್ಕಿಸಿ.
08192-250571, 98864 97330, 92427 90163, 98444 63860



BHADRA
VIDYA VINAYENA SHOBHATE
BHADRA EDUCATION TRUST ®
**BHADRA P.U. COLLEGE**
SUCCESSFUL 14 YEARS EXCELLENCE IN EDUCATION
SCIENCE PCMB & PCMCs
Heartily Congratulations
2nd PUC Results for 2022-23

OUR TOPPERS
VISHWANATH K.B. 97%
VINAYAKA A.R. 92.6%
PUNITEETH S.P. 91%
AKASH L.G. 90%
SACHIN JADAV 90%
KALLESH P.N. 88%
RAJANI R. 87%
SIDDU S. 86%
CHETAN S.G. 85%
WASEEM AKRAM 85%
TARUN 83%
SRIRAMA M. 83%
AKSHATHA 83%
LAKSHARI NAIK 83%
SANJANA V.P. 82%
& Many More...

Admissions Open for I PUC
ಬೆಳಕು TEAM
Free Admissions for above 96% in SSLC*

COMMERCE EBAS & EBACs.
OUR TOPPERS
Shraddha V.Shet 94%
Suhas S. 93%
Jeevetha K.G. 93%
Manoj J.C. 92%
Pooja Kolekar 92%
Rakshita H 92%
Shaheena Banu 91%
Chaya K.M 91%
Sushmitha C.P.M 91%
Pallavi Chowdhury 91%
Kushal S.N 90%
Nishath P.Z 90%
Keerthana D.N 89%
Meghana M.N 89%
Suma B.M 87%
Anjali M.K 86%
Mukhta Shree J.V 86%
Naresh H.P 86%

Best Wishes from: Management Principal & Staff
Admissions Open B.COM B.C.A. B.B.A
BHADRA INSTITUTE OF MANAGEMENT & INFORMATION SCIENCE STUDIES

10th Cross, Near Bhadra Bus Stop, BIET College Road, Siddaveerappa Badavane, Davangere-577 004.
SCIENCE: 8073747804, 9844626294, 9916323115, 9164186348 | COMMERCE: Ph: 08192-296304, Mob: 9880445536, 8884440005


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte